# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಫೆಬ್ರವರಿ 02, 2022

ಸಂಪುಟ : 48 ಸಂಚಿಕೆ : 263 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


# ಬಜೆಟ್‌ನಲ್ಲಿ ಮೂಲ ಸೌಲಭ್ಯಕ್ಕೆ ಬಲ

## ಹೂಡಿಕೆ ಹೆಚ್ಚಿಸಿ ಆರ್ಥಿಕ ಬೆಳವಣಿಗೆ, ಸಪ್ತ ವಲಯಗಳ ಸೌಲಭ್ಯಗಳಿಗೆ ಸರ್ಕಾರದ ಸೂತ್ರ

ನವದೆಹಲಿ, ಫೆ. 1 - ಹೆದ್ದಾರಿಯಿಂದ ಹಿಡಿದು ಕಡಿಮೆ ವೆಚ್ಚದ ಮನೆಗಳವರೆಗೆ ಹಲವಾರು ಮೂಲಭೂತ ಸೌಲಭ್ಯಗಳಲ್ಲಿ ಹೂಡಿಕೆ ಹೆಚ್ಚಿಸುವ ಮೂಲಕ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಲು ಕೇಂದ್ರ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

2022-23ರ ಸಾಲಿನ ಬಜೆಟ್ 39.45 ಲಕ್ಷ ಕೋಟಿ ರೂ.ಗಳ ಗಾತ್ರದ್ದಾಗಿದೆ. ಉದ್ಯೋಗ ಸೃಷ್ಟಿ ಹಾಗೂ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಮೂಲಭೂತ ಸೌಲಭ್ಯಗಳಲ್ಲಿ ಹೂಡಿಕೆ ಮಾಡಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಈ ಬಾರಿಯ ಬಜೆಟ್‌ನಲ್ಲಿ ಯಾವುದೇ ಹೊಸ ತೆರಿಗೆಗಳನ್ನು ಹೇರಿಲ್ಲ. ಆದರೆ, ಆದಾಯ ತೆರಿಗೆಯಲ್ಲೂ ವಿನಾಯಿತಿ ನೀಡಿಲ್ಲ.

ಬಜೆಟ್‌ನಲ್ಲಿ ಆದಾಯ ತೆರಿಗೆ ಹಂತಗಳು ಹಾಗೂ ತೆರಿಗೆ ದರದಲ್ಲಿ ಯಾವುದೇ ಬದಲಾವಣೆ ಮಾಡದ ಸೀತಾರಾಮನ್, ಮೂಲಭೂತ ಸೌಲಭ್ಯ ಹೂಡಿಕೆಯನ್ನು 7.5 ಲಕ್ಷ ಕೋಟಿ ರೂ.ಗಳಿಗೆ ನಿಗದಿ ಪಡಿಸಲು ಪ್ರಸ್ತಾಪಿಸಿದ್ದಾರೆ. ಇದು ಕಳೆದ ವರ್ಷಕ್ಕಿಂತ ಶೇ.35ರಷ್ಟು ಹೆಚ್ಚಾಗಿದೆ.

ರಸ್ತೆ, ರೈಲ್ವೆ, ವಿಮಾನ ನಿಲ್ದಾಣ, ಬಂದರು, ಸಮೂಹ ಸಾರಿಗೆ, ಜಲ ಮಾರ್ಗ ಹಾಗೂ (2ನೇ ಪುಟಕ್ಕೆ)

### ರಿಸರ್ವ್ ಬ್ಯಾಂಕ್‌ನಿಂದ ಡಿಜಿಟಲ್ ರೂಪಾಯಿ

ನವದೆಹಲಿ, ಫೆ. 1 - ಏಪ್ರಿಲ್ 2022ರಿಂದ ಆರಂಭವಾಗಲಿರುವ ಹಣಕಾಸು ವರ್ಷದಿಂದ ರಿಸರ್ವ್ ಬ್ಯಾಂಕ್ ಡಿಜಿಟಲ್ ಹಣ ಜಾರಿಗೆ ಬರಲಿದೆ. ಇದರಿಂದ ಡಿಜಿಟಲ್ ಆರ್ಥಿಕತೆ ಹಾಗೂ ಹಣದ ನಿರ್ವಹಣೆಯಲ್ಲಿ ದಕ್ಷತೆ ಸಾಧ್ಯವಾಗಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ಬಜೆಟ್ ವೇಳೆ ಈ ಬಗ್ಗೆ ಘೋಷಣೆ ಮಾಡಿರುವ ಅವರು, ಡಿಜಿಟಲ್ ಹಣದಿಂದ ಹಣಕಾಸು ವ್ಯವಸ್ಥೆ ನಿರ್ವಹಣೆಗೂ ನೆರವಾಗಲಿದೆ ಎಂದಿದ್ದಾರೆ.

ಡಿಜಿಟಲ್ ಹಣದಿಂದ ವ್ಯವಸ್ಥೆಯಲ್ಲಿ ಹೆಚ್ಚು ದಕ್ಷತೆ ಹಾಗೂ ಕಡಿಮೆ ವೆಚ್ಚದ ಹಣ ಬರಲಿದೆ. ಹೀಗಾಗಿ ಬ್ಲಾಕ್‌ಚೈನ್ ಆಧರಿತ ಡಿಜಿಟಲ್ ರೂಪಾಯಿ ಜಾರಿಗೆ ತರಲಾಗುವುದು ಎಂದವರು ಹೇಳಿದ್ದಾರೆ.



### ಆಹಾರ ಸಬ್ಸಿಡಿ ಇಳಿಕೆ

2022-23ರ ಹಣಕಾಸು ವರ್ಷದಲ್ಲಿ ಆಹಾರ, ರಸಗೊಬ್ಬರ ಹಾಗೂ ಪೆಟ್ರೋಲಿಯಂ ಸಬ್ಸಿಡಿಗಳು ಶೇ.27ರಷ್ಟು ಇಳಿಕೆಯಾಗಿ 3.17 ಲಕ್ಷ ಕೋಟಿ ರೂ. ಆಗಿರಲಿದೆ. 2021-22ರಲ್ಲಿ ಸಬ್ಸಿಡಿ ವೆಚ್ಚ 4.33 ಲಕ್ಷ ಕೋಟಿ ರೂ. ಆಗಿತ್ತು.

### 400 ವಂದೇ ಭಾರತ್ ರೈಲು

ಮೂರು ವರ್ಷಗಳಲ್ಲಿ 400 ಹೊಸ ವಂದೇ ಭಾರತ್ ರೈಲುಗಳಿಗೆ ಚಾಲನೆ ನೀಡಲಾಗುವುದು. ಸಣ್ಣ ರೈತರು ಹಾಗೂ ಸಣ್ಣ ಉದ್ಯಮಗಳಿಗಾಗಿ ರೈಲ್ವೆ ಹೊಸ ಸೇವೆಗಳನ್ನು ಒದಗಿಸಲಿದೆ. ನಾಲ್ಕು ಹೊಸ ಮಲ್ಟಿ- ಮಾಡೆಲ್ ಪಾರ್ಕ್‌ಗಳನ್ನು ಸ್ಥಾಪಿಸಲಾಗುವುದು. ವಂದೇ ಭಾರತ್ ರೈಲುಗಳನ್ನು ಕಬ್ಬಿಣದ ಬದಲು ಅಲ್ಯೂಮಿನಿಯಂನಲ್ಲಿ ನಿರ್ಮಿಸಲಾಗುವುದು. ಹಗುರ ರೈಲುಗಳಿಗೆ ಇಂಧನದ ಅಗತ್ಯ ಕಡಿಮೆ ಇರಲಿದೆ.

### ಮೂರು ವರ್ಷಗಳ ನಂತರ ನೇರ ತೆರಿಗೆ ಹೆಚ್ಚಳ

ನೇರ ತೆರಿಗೆ ಸಂಗ್ರಹ 2021-22ರ ಹಣಕಾಸು ವರ್ಷದಲ್ಲಿ 12.50 ಲಕ್ಷ ಕೋಟಿ ರ.ೂಗಳಿಗೆ ತಲುಪಲಿದೆ. ಇದರಲ್ಲಿ 6.35 ಲಕ್ಷ ಕೋಟಿ ರೂ. ಕಾರ್ಪೊರೇಟ್ ಹಾಗೂ 6.15 ಲಕ್ಷ ಕೋಟಿ ರೂ. ವೈಯಕ್ತಿಕ ಆದಾಯ ತೆರಿಗೆ. ಸರ್ಕಾರ ಈ ವರ್ಷ 11.08 ಲಕ್ಷ ಕೋಟಿ ರೂ.ಗಳ ನೇರ ತೆರಿಗೆ ಅಂದಾಜು ಹೊಂದಿತ್ತು. ಮೂರು ವರ್ಷಗಳ ನಂತರ ಅಂದಾಜಿಗಿಂತ ಹೆಚ್ಚು ತೆರಿಗೆ ಸಂಗ್ರಹವಾಗಿದೆ.

### ಅಧಿಕಾರಿಗಳ ತರಬೇತಿಗೆ 288 ಕೋಟಿ ರೂ.

ಅಧಿಕಾರಿಗಳಿಗೆ ಭಾರತ ಹಾಗೂ ವಿದೇಶಗಳಲ್ಲಿ ತರಬೇತಿ ನೀಡಲು 288.14 ಕೋಟಿ ರೂ. ನಿಗದಿ ಪಡಿಸಲಾಗಿದೆ. ಆಡಳಿತ ಸುಧಾರಣೆಗೆ 44.25 ಕೋಟಿ ರೂ. ಒದಗಿಸಲಾಗಿದೆ.

### ಹೆದ್ದಾರಿ 25,000 ಕಿ.ಮೀ.ಗಳಿಗೆ ವಿಸ್ತರಣೆ

ಇನ್ನೊಂದು ವರ್ಷದಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನು 25 ಸಾವಿರ ಕಿ.ಮೀ. ಉದ್ದಕ್ಕೆ ವಿಸ್ತರಿಸಲಾಗುವುದು. ಇದಕ್ಕಾಗಿ ಖಾಸಗಿ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸಲಾಗುವುದು. ಪ್ರಯಾಣ ಹಾಗೂ ಸರಕು ಸಾಗಣೆ ವೇಗ ಹೆಚ್ಚಿಸಲು 'ಪಿಎಂ ಗತಿ ಶಕ್ತಿ' ಬೃಹತ್ ಯೋಜನೆ ಮೂಲಕ ಎಕ್ಸ್‌ಪ್ರೆಸ್ ವೇಗಳನ್ನು ನಿರ್ಮಿಸಲಾಗುವುದು.

### ಉದ್ಯೋಗ ಖಾತ್ರಿ ಅನುದಾನ ಶೇ.25ರಷ್ಟು ಕಡಿತ

ಕೇಂದ್ರ ಸರ್ಕಾರ ಉದ್ಯೋಗ ಖಾತ್ರಿ ಯೋಜನೆಗೆ 73,000 ಕೋಟಿ ರೂ. ಹಣ ನೀಡಲಿದೆ. ಪ್ರಸಕ್ತ ವರ್ಷದ ಪರಿವರ್ತಿತ ಅಂದಾಜಿಗಿಂತ ಶೇ.25.51ರಷ್ಟು ಕಡಿಮೆಯಾಗಿದೆ. ಕಳೆದ ವರ್ಷವೂ ಬಜೆಟ್‌ನಲ್ಲಿ 73 ಸಾವಿರ ಕೋಟಿ ರೂ. ನೀಡಲಾಗಿತ್ತು. ಅಂತಿಮವಾಗಿ 98 ಸಾವಿರ ಕೋಟಿ ರೂ. ವೆಚ್ಚವಾಗಿತ್ತು.

### ಮಾನಸಿಕ ಆರೋಗ್ಯಕ್ಕೆ ಹೊಸ ಯೋಜನೆ

ಆರೋಗ್ಯ ವಲಯಕ್ಕೆ 86,200.65 ಕೋಟಿ ರೂ. ನೀಡಲಾಗಿದೆ. ಇದು ಕಳೆದ ವರ್ಷಕ್ಕಿಂತ ಶೇ.16ರಷ್ಟು ಹೆಚ್ಚಳವಾಗಿದೆ. ಮಾನಸಿಕ ಆರೋಗ್ಯಕ್ಕಾಗಿ ರಾಷ್ಟ್ರೀಯ ಟೆಲಿ ಮೆಂಟಲ್ ಹೆಲ್ತ್ ಪ್ರೋಗ್ರಾಮ್‌ಗೆ ಚಾಲನೆ ನೀಡಲಾಗುವುದು. ರಾಷ್ಟ್ರೀಯ ಡಿಜಿಟಲ್ ಆರೋಗ್ಯ ವ್ಯವಸ್ಥೆ ಎಂಬ ವೇದಿಕೆಯೂ ಆರಂಭವಾಗಲಿದೆ.

## ಡಿಜಿಟಲ್ ವಿಶ್ವವಿದ್ಯಾನಿಲಯ ಸ್ಥಾಪನೆ

ನವದೆಹಲಿ, ಫೆ. 1 - ಕೌಶಲ್ಯ ಹಾಗೂ ಜೀವನಾಧಾರಕ್ಕಾಗಿ ಅಗತ್ಯ ಡಿಜಿಟಲ್ ಸೌಲಭ್ಯ ಕಲ್ಪಿಸಲು ದೇಶ್ - ಸ್ಟಾಕ್ ಇ-ಪೋರ್ಟಲ್ ಆರಂಭಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ತಿಳಿಸಿದ್ದಾರೆ.

ವಿಶ್ವ ದರ್ಜೆಯ ವಿಶ್ವವಿದ್ಯಾನಿಲಯ ಶಿಕ್ಷಣ ಒದಗಿಸಲು ಡಿಜಿಟಲ್ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸುವುದಾಗಿಯೂ ಅವರು ಹೇಳಿದ್ದಾರೆ.

ಹಲವಾರು ಭಾರತೀಯ ಭಾಷೆಗಳಲ್ಲಿ ವಿಶ್ವ ವಿದ್ಯಾನಿಲಯ ಕಾರ್ಯ ನಿರ್ವಹಿಸಲಿದೆ. ಅತ್ಯುತ್ತಮ ಸರ್ಕಾರಿ ವಿಶ್ವವಿದ್ಯಾನಿಲಯಗಳು ಹಾಗೂ ಸಂಸ್ಥೆಗಳು ಡಿಜಿಟಲ್ ವಿ.ವಿ. ಭಾಗವಾಗಲಿವೆ ಎಂದವರು ಹೇಳಿದ್ದಾರೆ. ಕಲಿಕೆಗೆ ಉತ್ತೇಜನ ನೀಡಲು 750 ಆನ್‌ಲೈನ್ ವಿಜ್ಞಾನ ಮತ್ತು ಗಣಿತ ಪ್ರಯೋಗಾಲ ಯಗಳು, 75 ಕೌಶಲ್ಯ - ಇ ಲ್ಯಾಬ್‌ಗಳನ್ನು ರಚಿಸಲಾಗುವುದು ಎಂದವರು ತಿಳಿಸಿದ್ದಾರೆ.

ಕೈಗಾರಿಕೆಗಳ ಅಗತ್ಯಗಳಿಗೆ ಅನುಗುಣವಾಗಿ ಕೌಶಲ್ಯ ಒದಗಿಸಲು ರಾಷ್ಟ್ರೀಯ ಕೌಶಲ್ಯ ಅರ್ಹತಾ ರೂಪುರೇಷೆ ರಚಿಸಲಾಗುವುದು ಎಂದೂ ಅವರು ಹೇಳಿದ್ದಾರೆ.


### ಆನ್‌ಲೈನ್ ಪ್ರಯೋಗಾಲಯ ಸ್ಥಾಪನೆ, ಕಲಿಕೆಯ ಚಾನಲ್‌ಗಳ ಸಂಖ್ಯೆ 200ಕ್ಕೆ ಹೆಚ್ಚಳ

ಜನಸಾಮಾನ್ಯರಿಗೆ ಅಗತ್ಯವಾಗಿರುವ ಕೌಶಲ್ಯ ಒದಗಿಸಲು ಹಾಗೂ ಕೌಶಲ್ಯ ವೃದ್ಧಿಸಲು ಆನ್‌ಲೈನ್ ಮೂಲಕ ತರಬೇತಿ ನೀಡಲಾಗುವುದು ಎಂದವರು ಹೇಳಿದ್ದಾರೆ.

ಎಲ್ಲಾ ರಾಜ್ಯಗಳ ಆಯ್ದ ಐ.ಟಿ.ಐ.ಗಳಲ್ಲಿ ಡ್ರೋನ್ ಆಧರಿತ ಸೇವೆಗಳನ್ನು ಕಲಿಸಲಾಗುವುದು ಎಂದೂ ಅವರು ಹೇಳಿದ್ದಾರೆ. ಟಿ.ವಿ.ಗಳ ಮೂಲಕ ಮಕ್ಕಳು ಕಲಿಯುವಂತೆ ಮಾಡಲು ಈಗಿರುವ ಶಿಕ್ಷಣದ ಚಾನಲ್‌ಗಳ ಸಂಖ್ಯೆಯನ್ನು 12ರಿಂದ 200ಕ್ಕೆ ಹೆಚ್ಚಿಸಲಾಗುವುದು ಎಂದೂ ಅವರು ಹೇಳಿದ್ದಾರೆ.

## ಆರ್ಥಿಕ ಸುಧಾರಣೆ, ಬೆಳವಣಿಗೆಗೆ ಪೂರಕ

ಬೆಂಗಳೂರು, ಫೆ. 1 - ಮುಂಬರುವ ವರ್ಷಗಳಲ್ಲಿ ಆರ್ಥಿಕ ಸುಧಾರಣೆ, ಸ್ಥಿರೀಕರಣ ಮತ್ತು ಬೆಳವಣಿಗೆಗೆ ಪೂರಕವಾದ ಕೇಂದ್ರ ಬಜೆಟ್ ಮಂಡಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. 2022-23ನೇ ಸಾಲಿನ ಕೇಂದ್ರ ಮುಂಗಡ ಪತ್ರಕ್ಕೆ ಸಂಬಂಧಿಸಿದಂತೆ ಇಂದು ಗೃಹ ಕಚೇರಿ ಕೃಷ್ಣಾದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೋವಿಡ್ ನೆರಳಿನಲ್ಲಿ ಭಾರತದ ಆರ್ಥಿಕತೆಯನ್ನು ಶೇ.9.2 ಕ್ಕೆ ಹೆಚ್ಚಿಸುವ ಗುರಿಯನ್ನು ಹೊಂದಿದೆ. ಬಂಡವಾಳ ಹೂಡಿಕೆ ಹಾಗೂ ಬಳಕೆ ಎರಡನ್ನೂ ಹೆಚ್ಚಿಸುವ ದೂರದೃಷ್ಟಿಯಿಂದ ಈ ಬಾರಿಯ ಬಜೆಟ್ ಮಂಡಿಸಲಾಗಿದೆ ಎಂದು ತಿಳಿಸಿದರು. ಬಂಡವಾಳ ಹಾಗೂ ಮೂಲಸೌಕರ್ಯಗಳ ಅಭಿವೃದ್ಧಿಯ ಮುಖಾಂತರ ಆರ್ಥಿಕತೆ ಹೆಚ್ಚುತ್ತದೆ. ಉತ್ಪಾದನೆ ಹೆಚ್ಚಿ ಬಳಕೆ ಜಾಸ್ತಿಯಾದಾಗ ಆರ್ಥಿಕತೆ ಹೆಚ್ಚುತ್ತದೆ. ಮೂಲಸೌಕರ್ಯಗಳ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದ ಹೂಡಿಕೆಯಾಗುತ್ತಿದೆ. ರಾಷ್ಟ್ರೀಯ (2ನೇ ಪುಟಕ್ಕೆ)



## ಬಡವರ ವಿನಾಶವೇ ಮೋದಿ ಉದ್ದೇಶ



ಬೆಂಗಳೂರು, ಫೆ. 1 - ಶ್ರೀಮಂತರ ಜೊತೆ ಕೈ ಜೋಡಿಸಿ ಬಡವರ ವಿನಾಶ ಮಾಡುವುದೇ ಕೇಂದ್ರ ಸರ್ಕಾರದ ಉದ್ದೇಶ ಎಂಬುದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಬಜೆಟ್‌ನಿಂದ ಸ್ಪಷ್ಟವಾಗುತ್ತಿದೆ ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಕಟುವಾಗಿ ಟೀಕಿಸಿದ್ದಾರೆ. ಬಜೆಟ್ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಎಂದು ಹೇಳುತ್ತಾ ಅಧಿಕಾರಕ್ಕೆ ಬಂದರು. ಆದರೆ, 'ಅಮೀರ್ ಕೆ ಸಾಥ್, ಗರೀಬೋಂಕಾ ವಿನಾಶ್' ಅವರ ಏಕೈಕ ಗುರಿ ಎಂಬುದು ಬಜೆಟ್‌ನಿಂದ ಗೊತ್ತಾಗುತ್ತಿದೆ ಎಂದಿದ್ದಾರೆ. ಸೀತಾರಾಮನ್ ಅವರು ತಮ್ಮ ಬಜೆಟ್‌ನಲ್ಲಿಯಾವುದೇ ಮುಜುಗರ-ಅಂಜಿಕೆ ಇಲ್ಲದೆ ಶ್ರೀಮಂತರು ಮತ್ತು ಕ್ರೋನಿ ಬಂಡವಾಳಿಗರ ಕೈ ಹಿಡಿದು, ಬಡವರು, ರೈತರು, ಯುವಜನರನ್ನು ಮಾತ್ರವಲ್ಲ, ತಮ್ಮ ಪಕ್ಷವನ್ನು ಬೆಂಬಲಿಸುತ್ತಾ ಬಂದಿರುವ ಮಧ್ಯಮವರ್ಗವನ್ನೂ ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ ಎಂದು ಸಿದ್ದರಾಮಯ್ಯ ಆಕ್ಷೇಪಿಸಿದ್ದಾರೆ. ರೈತರ ಚಳುವಳಿಯ (2ನೇ ಪುಟಕ್ಕೆ)

## ಜಾತೀಯತೆ ಹೋಗಲಾಡಿಸಿ ನಾವೆಲ್ಲಾ ಒಂದು ಎನ್ನುವ ಸಂಕಲ್ಪ ಮಾಡಬೇಕಾಗಿದೆ: ಬೀಳಗಿ

ದಾವಣಗೆರೆ, ಫೆ. 1- ಕಾಯಕಕ್ಕೊಂದು ಜಾತಿಯನ್ನು ಸೀಮಿತ ಮಾಡಲಾಗಿದ್ದು ಅದನ್ನು ಹೋಗಲಾಡಿಸಲೆಂದೇ ಅಂದಿನ ಶರಣರು ಹೋರಾಟ ಮಾಡಿದರು. ಜಾತೀಯತೆಯನ್ನು ಹೋಗಲಾಡಿಸಿ, ನಾವೆಲ್ಲರೂ ಒಂದು ಎನ್ನುವ ಸಂಕಲ್ಪವನ್ನು ಮಡಿವಾಳ ಮಾಚಿದೇವರ ಜಯಂತಿಯಂದು ನಾವೆಲ್ಲರೂ ಮಾಡಬೇಕಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅಭಿಪ್ರಾಯಪಟ್ಟರು

ಜಿಲ್ಲಾಡಳಿತ ಭವನದಲ್ಲಿ ಆಯೋಜಿಸಲಾಗಿದ್ದ ಮಡಿವಾಳ ಮಾಚಿದೇವರ ಜಯಂತ್ಯುತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಸರಳ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿಗಳು, ಜಾತಿಗೆ ಸೀಮಿತರಾಗದೆ ಎಲ್ಲರೊಂದಿಗೂ ಬೆರೆತು ನಾವು ಎಲ್ಲಾ ಕೆಲಸಗಳನ್ನು ಮಾಡಬೇಕಾಗಿದೆ. ನಮ್ಮ ನಮ್ಮಗಳ ಕಾಯಕದ ಆಧಾರದ ಮೇಲೆ ನಮ್ಮನಮ್ಮಜಾತಿಗಳನ್ನುಸೀಮಿತಗೊಳಿಸಲಾಗಿದ್ದು, ಇದರಿಂದ ಎಲ್ಲರೂ ಹೊರ ಬರಬೇಕಾಗಿದೆ. ಅಲ್ಲದೆ ಅಂದು ಶರಣರು ಮಾಡಿದ ಕಲ್ಯಾಣ ಕ್ರಾಂತಿಯ ಬಗ್ಗೆ ನಾವೆಲ್ಲ ಅರಿತು ಅವರಂತೆ ಸಾಗಬೇಕಾಗಿದೆ ಎಂದು ಕರೆ ನೀಡಿದರು.



### ಜಿಲ್ಲಾಡಳಿತ ಭವನದಲ್ಲಿ ಮಡಿವಾಳ ಮಾಚಿದೇವರ ಜಯಂತಿ ಆಚರಣೆ

ನಾನು ಈ ಹಿಂದೆ ಬಸವ ಕಲ್ಯಾಣದಲ್ಲಿ ಚುನಾವಣಾ ವೀಕ್ಷಕರಾಗಿ ಕೆಲಸ ಮಾಡಿದ ಸಂದರ್ಭದಲ್ಲಿ ಮಾಚಿದೇವರ ಗವಿಯನ್ನು ವೀಕ್ಷಿಸಿದೆ. ನಿಜಕ್ಕೂ ರೋಮಾಂಚನ ಆಯಿತು. ಅಷ್ಟೇ ಅಲ್ಲ ಅವರು ಬದುಕಿದ ರೀತಿಯನ್ನು ತಿಳಿದು ಆಶ್ಚರ್ಯವಾಯಿತು. ಅಂದಿನ ಕಲ್ಯಾಣ ಕ್ರಾಂತಿಯ ಕುಡಿಗಳೇ ಈಗ ದೇಶದಲ್ಲಿ ವಿಶ್ವದಲ್ಲಿ ರಾಜ್ಯದಲ್ಲಿ ಎಲ್ಲೆಡೆ ಪಸರಿಸಿದ್ದು ಇಂದು ನಾವುಗಳು ಈ ರೀತಿ ಬದುಕಲು ನಮಗೆ ಅನುಕೂಲವಾಗಿದೆ ಎಂದು ಹೇಳಿದರು.

ದಾವಣಗೆರೆ ಜಿಲ್ಲಾ ಮಡಿವಾಳ ಮಾಚಿದೇವ ಸಂಘದ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಆವರಗೆರೆ ಎಚ್.ಜಿ .ಉಮೇಶ್ (2ನೇ ಪುಟಕ್ಕೆ)

## ರೈತರಿಗೆ ಕಿಸಾನ್ ಡ್ರೋನ್, ಡಿಜಿಟಲ್ ಸೇವೆ : ನಿರ್ಮಲಾ ಸೀತಾರಾಮನ್

ನವದೆಹಲಿ, ಫೆ. 1 - ಕೃಷಿ ವಲಯಕ್ಕೆ ಕಿಸಾನ್ ಡ್ರೋನ್, ರಾಸಾನಿಯಕ ಮುಕ್ತ ನೈಸರ್ಗಿಕ ಕೃಷಿ, ಖಾಸಗಿ - ಸಾರ್ವಜನಿಕ ಸಹಭಾಗಿತ್ವದಲ್ಲಿ ಡಿಜಿಟಲ್ ಸೇವೆ ಹಾಗೂ ಕೃಷಿಕರಿಗೆ ಹೈಟೆಕ್ ಸೇವೆಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕೇಂದ್ರ ಬಜೆಟ್‌ನಲ್ಲಿ ತಿಳಿಸಿದ್ದಾರೆ.

ಕೃಷಿ ಬೆಳೆಗಳ ಪರಿಶೀಲನೆ, ಭೂ ದಾಖಲೆಗಳ ಡಿಜಿಟಲೀಕರಣ ಹಾಗೂ ಕೀಟನಾಶಕಗಳ ಸಿಂಪಡಣೆಗಾಗಿ ಕಿಸಾನ್ ಡ್ರೋನ್‌ಗಳ ಬಳಕೆಗೆ ಉತ್ತೇಜನ ನೀಡಲಾಗುವುದು ಎಂದವರು ಹೇಳಿದ್ದಾರೆ.

ನಬಾರ್ಡ್ ಹಾಗೂ ಕೃಷಿ ನವೋದ್ಯಮಗಳು ಹಾಗೂ ಗ್ರಾಮೀಣ ಉದ್ಯಮಿಗಳ ಜೊತೆಗೂಡಿ ಇದಕ್ಕೆ ಅಗತ್ಯವಾದ ಬಂಡವಾಳ ಒದಗಿಸಲಾಗುವುದು ಎಂದು ಸೀತಾರಾಮನ್ ಹೇಳಿದ್ದಾರೆ.

## ಸಹಕಾರಿ ಸಂಸ್ಥೆಗಳ ಮೇಲಿನ ತೆರಿಗೆ ಇಳಿಕೆ

ನವದೆಹಲಿ, ಫೆ. 1 - ಸಹಕಾರಿ ಸಂಸ್ಥೆಗಳ ಪರ್ಯಾಯ ಕನಿಷ್ಠ ತೆರಿಗೆ (ಎ.ಎಂ.ಟಿ.) ಅನ್ನು ಈಗಿರುವ ಶೇ.18.5 ರಿಂದ ಶೇ.15ಕ್ಕೆ ಇಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಬಜೆಟ್ ಮಂಡನೆ ವೇಳೆ ಈ ವಿಷಯ ತಿಳಿಸಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಸಹಕಾರಿ ಸಂಸ್ಥೆಗಳಿಗೆ ಖಾಸಗಿ ಕಂಪನಿಗಳಷ್ಟೇ ಶೇ.15ರ ತೆರಿಗೆ ವಿಧಿಸ (3ನೇ ಪುಟಕ್ಕೆ)

## ವಜ್ರ, ಹರಳುಗಳ ಆಮದು ತೆರಿಗೆ ಇಳಿಕೆ

ನವದೆಹಲಿ, ಫೆ. 1 - ಪಾಲಿಶ್ ಮಾಡಿರುವ ಹಾಗೂ ಕಟ್ ಮಾಡಿದ ವಜ್ರ ಹಾಗೂ ಹರಳುಗಳ ಆಮದು ತೆರಿಗೆಯನ್ನು ಇಳಿಕೆ ಮಾಡಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಪ್ರಸಕ್ತ ಕಟ್ ಹಾಗೂ ಪಾಲಿಶ್ ಮಾಡಿದ ವಜ್ರಗಳು ಹಾಗೂ ಹರಳುಗಳ ಆಮದು ತೆರಿಗೆ ಶೇ.7.5ರಷ್ಟಿದೆ. ಇದನ್ನು ಶೇ.5ಕ್ಕೆ ಇಳಿಸಲಾಗುವುದು. ಕೊರೆದ ವಜ್ರಗಳ ಮೇಲಿನ ತೆರಿಗೆ ಈಗ ಶೇ.5ರಷ್ಟಿದ್ದು, ಅದನ್ನು ಸಂಪೂರ್ಣ


ವಿಜಯ ಬ್ಯಾಂಕಿನ ನಿವೃತ್ತ ವ್ಯವಸ್ಥಾಪಕರಾದ
ಕೆ.ಪಿ. ಕರೇಗೌಡ್ರು ನಿಧನ




ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್, 12ನೇ ಮುಖ್ಯ ರಸ್ತೆ ನಿವಾಸಿ ಹಾಗೂ
ಹರಿಹರ ತಾಲ್ಲೂಕು ಗೋವಿನಹಾಳು ಗ್ರಾಮದ ದಿ. ದಡ್ಡಿ ನಿಂಗಪ್ಪನವರ ಪುತ್ರರಾದ,
ಶ್ರೀ ಕೆ.ಪಿ. ಕರೇಗೌಡ್ರು
ಅವರು ದಿನಾಂಕ 01.02.2022ರ ಮಂಗಳವಾರ ರಾತ್ರಿ 8.45ಕ್ಕೆ ಅನಾರೋಗ್ಯದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 74 ವರ್ಷ ವಯಸ್ಸಾಗಿತ್ತು.
ಮೃತರ ಪಾರ್ಥಿವ ಶರೀರವನ್ನು ದಿನಾಂಕ 02.02.2022ರ ಬುಧವಾರ ಮಧ್ಯಾಹ್ನ 12 ಗಂಟೆಯವರೆಗೆ ಎಂ.ಸಿ.ಸಿ. 'ಬಿ' ಬ್ಲಾಕ್ (ನಿವೃತ್ತ ನೌಕರರ ಭವನದ ಹತ್ತಿರ) ದಾವಣಗೆರೆಯ ಅವರ ಸ್ವಗೃಹದಲ್ಲಿ ಇಡಲಾಗುವುದು. ನಂತರ ಅದೇ ದಿನ ಸಂಜೆ 4 ಗಂಟೆಗೆ ಗೋವಿನಹಾಳು ಗ್ರಾಮದಲ್ಲಿರುವ ಮೃತರ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಧರ್ಮಪತ್ನಿ : ಶ್ರೀಮತಿ ನಿರ್ಮಲ ಕರೇಗೌಡ್ರು
ಪುತ್ರರು : ಕೆ.ಪಿ. ನಿಂಗನಗೌಡ, ಕೆ.ಪಿ. ಕಿರಣ್ ಕುಮಾರ್, ಸೊಸೆ, ಮೊಮ್ಮಕ್ಕಳು
ದಡ್ಡಿ ಮನೆತನದವರು, ಗೋವಿನಹಾಳು ಮತ್ತು ಪುರತಗೆರೆ ಮನೆತನದವರು, ಹಿಂಡಸಘಟ್ಟ ಹಾಗೂ ಬಂಧು-ಮಿತ್ರರು
ಗ್ಲಾಸ್ ಪ್ಲಾನೆಟ್ ಮತ್ತು ನಿಹಾಲ್ ಬಿಲ್ಡಿಂಗ್ ಸಿಸ್ಟಮ್
ಮೊ. 99805 44440, 78998 43590


## ಅಭಿವೃದ್ಧಿಗೆ ವೇಗ ನೀಡುವ ಬಜೆಟ್

ದಾವಣಗೆರೆ, ಫೆ.1- ಕೊ ರೊನಾದಿಂದಾಗಿ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಸಂದ ರ್ಭ ದಲ್ಲೂ ಕೂಡ ಅಭಿವೃದ್ಧಿಗೆ ವೇಗ ನೀಡುವ ಬಜೆಟ್ ಅನ್ನು ಕೇಂ ದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ್ದಾರೆ ಎಂದು ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ರೈತರ ಆದಾಯ ದ್ವಿಗುಣಗೊಳಿಸಬೇಕೆನ್ನುವ ಮಾತಿಗೆ ಪೂರಕವಾಗಿ ಕನಿಷ್ಟ ಬೆಂಬಲ ಬೆಲೆಗಾಗಿ 2.75 ಲಕ್ಷ ಕೋಟಿ ಮೀಸಲಿಟ್ಟಿರುವುದು ಶ್ಲಾಘನೀಯ. 25 ಸಾವಿರ ಕಿ.ಮೀ ಹೆದ್ದಾರಿ ನಿರ್ಮಾಣ, ಪ್ರಧಾನ ಮಂತ್ರಿ ಗತಿಶಕ್ತಿ ಯೋಜನೆಗೆ ಪೂರಕವಾಗಿ ಕಾರ್ಗೋ ಟರ್ಮಿನಲ್‌ಗಳ ನಿರ್ಮಾಣ. ಮಹಾತ್ವಾಕಾಂಕ್ಷೆಯ ನದಿ ಜೋಡಣೆಯಂತಹ ಯೋಜನೆಗಳು ಗಮನ (3ನೇ ಪುಟಕ್ಕೆ)

## ಮಧ್ಯಮ ವರ್ಗದ ವಿರೋಧಿ ಬಜೆಟ್

ದಾವಣಗೆರೆ,ಫೆ.1- ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ ಸುಮಾರು 39.45 ಲಕ್ಷ ಕೋಟಿ ರೂಪಾಯಿ ಗಾತ್ರದ ಬಜೆಟ್ ಮಧ್ಯಮ ವರ್ಗದ ವಿರೋಧಿ ಬಜೆಟ್ ಎಂದು ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಬಜೆಟ್ ಹೆಸರಲ್ಲಿ ಮಾಡಲಾದ ಘೋಷಣೆಯಲ್ಲಿ ವೇತನ ವರ್ಗಕ್ಕೆ, ಮಧ್ಯಮ ವರ್ಗಕ್ಕೆ, ಬಡವರು ಮತ್ತು ಸೌಲಭ್ಯ ವಂಚಿತರಿಗೆ, ಯುವಕರಿಗೆ, ರೈತರಿಗೆ, ಎಂಎಸ್‌ಎಂಇ ಗಳಿಗೆ ಏನೂ ಇಲ್ಲ ಎಂದು ಹೇಳಿದ್ದಾರೆ. ಮೋದಿ ಸರ್ಕಾ ರ ಝೀರೋ ಸಮ್ (3ನೇ ಪುಟಕ್ಕೆ)

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**REQUIRED**
Well Trained and Skilled
O.T. Nurse
O.T. Technician
94488 86026

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ 40x35 ಪಶ್ಚಿಮ, 30x50 ಉತ್ತರ. ನೂತನ ಕಾಲೇಜು ಹಿಂಭಾಗ ಎಲ್ಐಸಿ ಕಾಲೋನಿಯಲ್ಲಿ 30x50 ಪೂರ್ವ, 30x50 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ.
ಮೊ. 97421-44715

**ಮನೆಯ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಮಾರಾಟಕ್ಕೆ/ಖರೀದಿಗೆ ವಿಚಾರಿಸಿರಿ**
ಮಹಾಲಕ್ಷ್ಮಿ ಲೇಔಟ್
ಪೂರ್ವ-33x66, 34x66
ಪೂರ್ವ, ಪಶ್ಚಿಮ-30x50, 30x40,
ಡ್ಯೂಪ್ಲೆಕ್ಸ್ ಮನೆ ಪೂರ್ವ, 30x40,
ಗ್ರೌಂಡ್ ಫ್ಲೋರ್, 1 ಮತ್ತು 2ನೇ ಮಹಡಿ
ಕೆ.ಬಿ. ಸುರೇಶ್
95911 60520

**ಮನೆ ಪಾಠ ಮಾಡಲು ಶಿಕ್ಷಕರು ಬೇಕಾಗಿದ್ದಾರೆ**
6ನೇ ತರಗತಿ ಐ.ಸಿ.ಎಸ್.ಇ ಸಿಲ್ಲೆಬಸ್ ಮ್ಯಾತಮೆಟಿಕ್ಸ್ ಮತ್ತು ಸೈನ್ಸ್ ಸಬ್ಜೆಕ್ಟ್‌ಗೆ ಮನೆಗೇ ಬಂದು ಪಾಠ ಮಾಡಲು ನುರಿತ ಶಿಕ್ಷಕರು ಬೇಕಾಗಿದ್ದಾರೆ.
98447 69841

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
97315 12365

**ಬೇಕಾಗಿದ್ದಾರೆ**
ದಾವಣಗೆರೆ ಕ್ಲಬ್‌ಗೆ ವೆಜ್ ಮತ್ತು ನಾನ್ ವೆಜ್ (ಮಿಲ್ಟ್ರಿ ಸ್ಟೈಲ್) ಹೋಟೆಲ್ ನಡೆಸುವವರು ಬೇಕಾಗಿದ್ದಾರೆ. ಸಂಪರ್ಕಿಸಿ :
89714 63739
94825 27446

**ಸಂಘ-ಸಂಸ್ಥೆ, NGO, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ಬೇಕಾಗಿದ್ದಾರೆ**
ಸೌತ್, ನಾರ್ತ್ ಇಂಡಿಯನ್ ಶೈಲಿಯಲ್ಲಿ ಅಡಿಗೆ ಮಾಡುವ ಭಟ್ಟರು, ಕ್ಲೀನಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ
90601 72745

**WANTED LECTURES**
For PHYSICS, CHEMISTRY, BIOLOGY
Salary: From 15K to 20K
63646 40296

**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಸಮುದ್ರದ ಮೀನಿನ ಆಹಾರಕ್ಕಾಗಿ ಸಂಪರ್ಕಿಸಿ
95133 14666
(ಹೋಂ ಡೆಲಿವರಿ ಮಾತ್ರ)

**ಹೋಟೆಲ್ ಕೆಲಸಕ್ಕೆ ಕೆಲಸಗಾರರು ಬೇಕಾಗಿದ್ದಾರೆ**
ವಿಚಾರಿಸಿರಿ :
ಫೋ. : 99646 36217

**ಮನೆ ಬಾಡಿಗೆಗೆ ಇದೆ**
2ನೇ ಮಹಡಿಯಲ್ಲಿ ಸಕಲ ಸೌಕರ್ಯ ಹಾಗೂ ವಾಸ್ತುವಿರುವ ಪೂರ್ವಕ್ಕೆ ಬಾಗಿಲು ಹಾಗೂ ವರಾಂಡ ಇರುವ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
#1859/34, "ಭಾವ ಸಂಗಮ"
4ನೇ ಮುಖ್ಯರಸ್ತೆ, LIC ಕಾಲೋನಿ,
ನೂತನ ಕಾಲೇಜ್ ಹಿಂಭಾಗ, ದಾವಣಗೆರೆ.
91642 96773, 94487 46875

**ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ**
Tally ಬಲ್ಲವರಿಗೆ ಆದ್ಯತೆ.
ರಾಮಧೂತ ಎಂಟರ್ ಪ್ರೈಸಸ್.
97388 27452

**ಬೇಕಾಗಿದ್ದಾರೆ**
ಮನೆ ಕೆಲಸದೊಂದಿಗೆ ವಯಸ್ಸಾದವರನ್ನು ನೋಡಿಕೊಳ್ಳಲು 24 ಗಂಟೆಯೂ ಅಥವಾ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಿಗೆ ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಊಟ - ವಸತಿ ಸೌಲಭ್ಯವಿರುತ್ತದೆ.
63639-54459

**ಮಳಿಗೆ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್ ದಾವಣಗೆರೆ.
ರೂಂ ಬಾಡಿಗೆಗೆ ಇದೆ
ಚಾಮರಾಜ ಪೇಟೆ, ದಾವಣಗೆರೆ.
ಫೋ. : 82177 72482

**ಸೈಟ್‌ಗಳು ಮಾರಾಟಕ್ಕಿವೆ**
ಎಂ.ಬಿ. ಸಿಟಿ ಪಕ್ಕ, ಉದಯ್ ಶಿವಕುಮಾರ್ ಲೇಔಟ್‌ನಲ್ಲಿ 30x60 2 ಪೂರ್ವ ಹಾಗೂ 30x60 ಪಶ್ಚಿಮ 1 ಸೈಟ್ ಮಾರಾಟಕ್ಕಿದೆ.
ರಿಯಲ್ ಎಸ್ಟೇಟ್ ಏಜೆಂಟ್
86181 82332

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಅನುಭವವುಳ್ಳವರಿಗೆ ಆದ್ಯತೆ. ಸಂಪರ್ಕಿಸಿ:
ಪೂಜಾ ಹಾರ್ಡ್‌ವೇರ್ಸ್
ಅರುಣ ಟಾಕೀಸ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ.
ಫೋ. : 70190 89694

**ಮಾರಾಟಕ್ಕಿವೆ**
ಉತ್ತಮ ತಳಿಯ ಅಡಿಕೆ ಸಸಿ ಮಾರಾಟಕ್ಕೆ ಲಭ್ಯವಿವೆ. ದಾವಣಗೆರೆಯಲ್ಲಿ (ದೊಡ್ಡ ಬಾತಿ)
ಸಂಪರ್ಕಿಸಿ :
88920 08800

**ಸೈಟ್‌ಗಳು ಮಾರಾಟಕ್ಕಿವೆ**
ಎಸ್.ಎಸ್. ಲೇಔಟ್ ಪೂರ್ವ, ಆಂಜನೇಯ ಬಡಾವಣೆ ಪೂರ್ವ, ಮಹಾಲಕ್ಷ್ಮಿ ಲೇಔಟ್ ಹತ್ತಿರ ಪೂರ್ವ KHB ಯಲ್ಲಿ 30x50 ಉತ್ತರ ಸೈಟ್‌ಗಳು ಮಾರಾಟಕ್ಕಿವೆ. ಸಂಪರ್ಕಿಸಿ
97425 12125

**ಬೇಕಾಗಿದ್ದಾರೆ**
ರಾಜಲಕ್ಷ್ಮಿ ಫಾರ್ಮಾದಲ್ಲಿ ಕೆಲಸ ಮಾಡಲು ಮಹಿಳೆಯರು ಮತ್ತು ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ
73534 37555
P.J Extension, 7th main, 7th Cross, Davangere.

**ಮನೆ ಬಾಡಿಗೆಗೆ ಇದೆ**
ಎಂಸಿಸಿ 'ಬಿ' ಬ್ಲಾಕ್, ಕುವೆಂಪು ನಗರ, 5ನೇ ಮೇನ್, 19ನೇ ಕ್ರಾಸ್, 3993/105, ಎರಡು ಬೆಡ್ ರೂಂ, ಕಾರ್ ಪಾರ್ಕಿಂಗ್ ವ್ಯವಸ್ಥೆ ಇರುವ ಮನೆ ಬಾಡಿಗೆಗೆ ಇದೆ. ನೆಲಮಹಡಿ, ಎ.ಇ.ಹೆಚ್. ವಾಲ್‌ರೋಬ್‌ಗಳು, ಬೋರ್‌ವೆಲ್ ಹಾಗೂ ಕಾರ್ಪೊರೇಷನ್ ನೀರಿನ ಸೌಲಭ್ಯವಿದೆ.
ಫೋ. : 70190 89694

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ.
97388 27452
74110 25934

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ರಾತ್ರಿ ಪಾಳೆಯದಲ್ಲಿ ಸೆಕ್ಯೂರಿಟಿ ಗಾರ್ಡ್ ಜೊತೆಗೆ ರೂಂ ಬಾಯ್ ಆಗಿ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ :
63639-54459

**ಸೈಟು ಮಾರಾಟಕ್ಕಿದೆ**
ವಿನಾಯಕ ಬಡಾವಣೆ 40x60 (ಉತ್ತರ)
ಬನಶಂಕರಿ-40x55 (ಪಶ್ಚಿಮ)
ಶಿವಕುಮಾರ ಬಡಾವಣೆ-40x55 (ಪಶ್ಚಿಮ)
ಮಹಾಲಕ್ಷ್ಮಿ ಬಡಾವಣೆ - 30x70 (ಪಶ್ಚಿಮ)
ಫೋ.: 95385 65909

**ಬೇಕಾಗಿದ್ದಾರೆ**
ಕಂಪ್ಯೂಟರ್, ಟ್ಯಾಲಿ ಅನುಭವವುಳ್ಳ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
ಶ್ರೀ ಮಂಜುನಾಥ ಸ್ವಾಮಿ ಆಟೋಮೊಬೈಲ್ಸ್,
ಮೊ: 99729 74626

**ಜಮೀನಿನ ಮೂಲ ಕ್ರಯ ಪತ್ರ ಕಳೆದಿದೆ**
ಹನುಮಕ್ಕ ಕೋಂ ಲೇಟ್ ಸಣ್ಣ ಸಿದ್ದಪ್ಪನವರ ಹೆಸರಿನಲ್ಲಿರುವ ಲೋಕಿಕೆರೆ ಗ್ರಾಮದ ರಿಜಿಸ್ಟರ್ ಸರ್ವೆ. ನಂ. 283/8ರ ಪತ್ರ ಸಂಖ್ಯೆ 3019/89-90ರ ಮೂಲ ದಾಖಲಾತಿಯು ದಿನಾಂಕ : 14.12.2021 ರಂದು ಮನೆ ಬದಲಾವಣೆ ಮಾಡುವಾಗ ಕಳೆದಿದೆ. ಸಿಕ್ಕವರು ಹದಡಿ ಪೊಲೀಸ್ ಠಾಣೆಗೆ ತಲುಪಿಸಲು ಕೋರಿದೆ.

**WANTED**
+ LADY RECEPTIONIST Cum COMPUTER OPERATOR (Any Degree)
+ ATTENDER
Contact : KOLEB
Pisale Complex, 8th main, P.J. Extn., Near Vegetable Shop, Davangere.
99868 15294
83106 67944

**EXCHANGE OFFER**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಷನ್ ಮತ್ತು ಸ್ಪಂಜ್ ಬೆಡ್, ಸೊಳ್ಳೆ ಮೆಸ್ ಸಿಗುತ್ತದೆ ಮತ್ತು ರಿಪೇರಿ, ಪಾಲಿಶ್ ಮಾಡಲಾಗುತ್ತದೆ.
88614 38237
78923 28599

**ಡಾ॥ ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು 02.02.2022ರ ಬುಧವಾರ ಮತ್ತು ನಾಳೆ 03.02.2022ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಬೋರ್‌ವೆಲ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ 1000 ಅಡಿವರೆಗೆ.
ಸಂಪರ್ಕಿಸಿ: ಬಸವರಾಜಪ್ಪ ಎಂ.ಟಿ.
ಜಲಸಂಶೋಧಕರು
94492 02888

**ಮನೆ ಮಾರಾಟಕ್ಕಿದೆ**
ಸಿದ್ಧವೀರಪ್ಪ ಬಡಾವಣೆ, 10ನೇ ಕ್ರಾಸ್. ನಂ. 1935/7, 44x60 ಅಳತೆಯಲ್ಲಿ 6 ಬೆಡ್ ರೂಂ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
99007 00091

**ಹೆಬ್ಬೇವು ಮರಗಳು ಮಾರಾಟಕ್ಕಿವೆ**
ದಾವಣಗೆರೆ ತಾ. ಕ್ಯಾತನಹಳ್ಳಿ ಸಮೀಪ ಅಂದಾಜು 250 ಮರಗಳು ಮಾರಾಟಕ್ಕಿವೆ. ಸಂಪರ್ಕಿಸಿ :
99804 46808

**ಶ್ರೀ ಮುರುಘನ್ ಬೋರ್‌ವೆಲ್ಸ್**
ನಮ್ಮಲ್ಲಿ ಸೂಪರ್ ಫಾಸ್ಟ್ 4.5' ಇಂಚು ಬೋರ್‌ವೆಲ್ ಕೊರೆಯಲಾಗುವುದು. ಮನೆಯ ಒಳಗಡೆ ಮತ್ತು ಹೊರಗಡೆ 300-450 ಅಡಿಯವರೆಗೆ ಕೊರೆಯಲಾಗುವುದು.
99640 78484, 95906 15776

**ಮನೆ ಬಾಡಿಗೆಗೆ**
1ನೇ ಫ್ಲೋರ್‌ನಲ್ಲಿ, 3 ಬೆಡ್ ರೂಂ ಹಾಗೂ 2 ಬೆಡ್ ರೂಂ, ಹೊಸ ಮನೆ, ವಿಳಾಸ : ಸಿದ್ದವೀರಪ್ಪ ಬಡಾವಣೆ, 8ನೇ ಕ್ರಾಸ್, ಡೋ. ನಂ. 1663/1-2, ಕಲ್ಪವೃಕ್ಷ, ದಾವಣಗೆರೆ.
ಸಂಪರ್ಕಿಸಿರಿ : 70198 78789
(Pets Not Allowed)

**ಬೇಕಾಗಿದ್ದಾರೆ**
ಕೆ.ಜಿ. ಶಿಕ್ಷಕಿಯರು, ಭಾಷಾ ಶಿಕ್ಷಕ/ಶಿಕ್ಷಕಿಯರು, ವಾರ್ಡನ್, ಮೇಲ್ವಿಚಾರಕರು, ಅರ್ಹತೆ:- ಪದವಿ, ವೃತ್ತಿಪರ ಕೋರ್ಸ್, ಸರಾಗವಾಗಿ ಇಂಗ್ಲಿಷ್ ಮಾತನಾಡಬಲ್ಲವರು
Schoonovate Consultancy
ಸ್ಕೂನೊವೇಟ್ ಕನ್ಸಲ್‌ಟೆನ್ಸಿ
99866 93419, 73536 39111

**ಸೈಟ್ ಮಾರಾಟಕ್ಕಿದೆ**
ಸಿದ್ದಲಿಂಗೇಶ್ವರ ಬಡಾವಣೆ, ಸಿದ್ದಗಂಗಾ ಶಾಲೆಯ ಮೇನ್ ಗೇಟ್ ಹತ್ತಿರ 20x60 ಅಡಿ ಅಳತೆಯ ಪಶ್ಚಿಮ ದಿಕ್ಕಿನ ಸೈಟ್ ಮಾರಾಟಕ್ಕಿದೆ.
ಆಸಕ್ತರು ವಿಚಾರಿಸಿ
98443 23294

**ಸೈಟುಗಳು ಮಾರಾಟಕ್ಕಿವೆ**
ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿ ಪೂರ್ವಾಭಿಮುಖದ 30x35 ಅಡಿವುಳ್ಳ ಸೈಟುಗಳು ಮಾರಾಟಕ್ಕಿವೆ.
ಸಂಪರ್ಕಿಸಿ : 94486 81376
98440 19575

**Work from Home**
Female telecaller required to speak in any one Tamil, Telugu, Marati and Hindi.
Salary : Rs. 12,000+ incentive. Call for walkin:
90089 85112

**ಬೇಕಾಗಿದ್ದಾರೆ**
Call Center - Girls
Accountant - Girls
Field Executive - Boys
Sri Kuruvatti Basaveshwara Pharma
College Road, P.J. Extn., Davangere.
95139 15520

**ಸೈಟ್‌ಗಳು ಮಾರಾಟಕ್ಕಿದೆ**
ಬಸವೇಶ್ವರ ಲೇಔಟ್ 50x60, ದಕ್ಷಿಣ, ಕುಂದುವಾಡ ರಸ್ತೆಗೆ ಹತ್ತಿರ, ಆಂಜನೇಯ ಬಡಾವಣೆ 60x40 ದಕ್ಷಿಣ, ರಶ್ಮಿ ಹತ್ತಿರ 40 ಅಡಿ ರಸ್ತೆಗೆ, ಕಮರ್ಷಿಯಲ್ ಸೈಟ್ 52x56.50, ದಕ್ಷಿಣ, 40x60 ರಿಂಗ್ ರಸ್ತೆ ಬಳಿ, ಡಿ.ಸಿ. ಆಫೀಸ್ ಹತ್ತಿರ (ಸೈಟ್‌ಗಳಿದ್ದಲ್ಲಿ ಖರೀದಿಸಲಾಗುವುದು (ಮಾಲೀಕರಿಂದ ಮಾತ್ರ)
97418 11694

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**ಶಿರಸಿ ಶ್ರೀ ಮಾರಿಕಾಂಬ ದೇವಿ ಜ್ಯೋತಿಷ್ಯ ಕೇಂದ್ರ**
ನಿಮ್ಮ ಜೀವನದ ಸುಖ-ದುಃಖ, ಸರ್ವ ಸಮಸ್ಯೆಗಳಿಗೆ ಪರಿಹಾರ ಸಿಗದೇ ನೊಂದಿದ್ದರೆ, ನಿಮ್ಮ ಯಾವುದೇ ಇಷ್ಟಪಟ್ಟ ಕಾರ್ಯಗಳನ್ನು ಇಲ್ಲಿ ಅತೀ ಶೀಘ್ರದಲ್ಲಿ 100% ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಪಂ. ಶ್ರೀನಿವಾಸ ಭಟ್ಟರ್ ವಂಶ ಪಾರಂಪರಿಕ ಜ್ಯೋತಿಷ್ಯರು
ಮೊ. 97407-69784
ಮನೆ ವಿಳಾಸ : ಎಂ.ಸಿ.ಸಿ. 'ಎ' ಬ್ಲಾಕ್, ಶ್ರೀ ಸಾಯಿ ಬಾಬಾ ಮಂದಿರದ ಹತ್ತಿರ, ದಾವಣಗೆರೆ.


## ಸದಾನಂದ ವಿ. ಕುರ್ಡೇಕರ್ ನಿಧನ



ವಿಜಯನಗರ ಜಿಲ್ಲೆ ಕೊಟ್ಟೂರು ಪಟ್ಟಣದ ವಾಸಿ ವಿ.ಎಸ್. ಕುರ್ಡೇಕರ್ ಜ್ಯುಯಲರ್ಸ್ ಮಾಲೀಕರಾದ

**ಸದಾನಂದ ವಿ. ಕುರ್ಡೇಕರ್**

ಇವರು ದಿನಾಂಕ 1.2.2022ರ ಮಂಗಳವಾರ ಬೆಳಗಿನ ಜಾವ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 77 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 1.2.2022ರ ಮಂಗಳವಾರ ಸಂಜೆ 5 ಗಂಟೆಗೆ ದಾವಣಗೆರೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಯಿತು.

ಇಂತಿ ದುಃಖತಪ್ತ ಕುಟುಂಬ ವರ್ಗ
ಮೊ: 94484 04919

# ಸತ್ಸಂಗ ಶಾಂತಿ, ನೆಮ್ಮದಿಯ ಜೊತೆಗೆ ಸಂಸ್ಕಾರ ಕಲಿಸುತ್ತದೆ

**ಯಲವಟ್ಟಿ ಶ್ರೀ ಗುರು ಸಿದ್ಧಾಶ್ರಮದ ಯೋಗಾನಂದ ಸ್ವಾಮೀಜಿ ಅಭಿಮತ**



ಮಲೇಬೆನ್ನೂರು, ಫೆ.1- ಸೈನಿಕರು ಮತ್ತು ರೈತರು ನಮ್ಮ ದೇಶದ ಎರಡು ಕಣ್ಣುಗಳಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಶ್ರೀ ಯೋಗಾನಂದ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಯಲವಟ್ಟಿ ಗ್ರಾಮದ ಶ್ರೀ ಗುರು ಸಿದ್ಧಾಶ್ರಮದಲ್ಲಿ ಅವರಾತ್ರಿ ಅಮವಾಸ್ಯೆ ಪ್ರಯುಕ್ತ ಇಂದು ಹಮ್ಮಿಕೊಂಡಿದ್ದ ಸತ್ಸಂಗ ಕಾರ್ಯಕ್ರಮದಲ್ಲಿ ಸಾರಥಿ ಗ್ರಾಮದ ನಿವೃತ್ತ ಯೋಧ ಸಿ.ಎಸ್.ಬಸವರಾಜ್ ಅವರನ್ನು ಸನ್ಮಾನಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸೈನಿಕರ ಶ್ರಮದಿಂದಾಗಿ ದೇಶದ ಜನ ನೆಮ್ಮದಿಯಾಗಿದ್ದರೆ, ರೈತರ ಶ್ರಮದಿಂದಾಗಿ ದೇಶದ ಜನ ಅನ್ನ ಊಟ ಮಾಡುತ್ತಿದ್ದಾರೆ. ಗುರುಗಳಿಂದಾಗಿ ಜನರು ಶಿಕ್ಷಣ, ಸಂಸ್ಕಾರ ಕಲಿತು ಉತ್ತಮ ಜೀವನ ನಡೆಸುತ್ತಿದ್ದಾರೆ. ಸತ್ಸಂಗ ಮನುಷ್ಯ ಜೀವನಕ್ಕೆ ಶಾಂತಿ, ನೆಮ್ಮದಿ ನೀಡುವ ಜೊತೆಗೆ ಸಂಸ್ಕಾರವನ್ನು ಕಲಿಸುತ್ತದೆ ಎಂದು ಶ್ರೀ ಯೋಗಾನಂದ ಸ್ವಾಮೀಜಿ ಅಭಿಪ್ರಾಯಪಟ್ಟರು.

ದಾಗಿನಕಟ್ಟೆಯ ಶ್ರೀ ಸಿದ್ಧಾರೂಢ ಆಶ್ರಮದ ಶ್ರೀ ಕೃಷ್ಣಾನಂದ ಭಾರತಿ ಸ್ವಾಮೀಜಿ ಮಾತನಾಡಿ, ಬದುಕಿನಲ್ಲಿ ಯಾವುದೂ ಸ್ಥಿರವಲ್ಲ. ದೇಶದ ಹೋದರೂ ನಾವು ಮಾಡಿದ ಪುಣ್ಯದ ಕೆಲಸಗಳು, ಸಾಧನೆಗಳು ಮಾತ್ರ ಸ್ಥಿರವಾಗಿರುತ್ತವೆ. ಮಕ್ಕಳನ್ನು ಸುಖವಾಗಿ ಬೆಳೆಸಿದರೆ ನಾಳೆ ಅವರ ದುಃಖಕ್ಕೆ ನೀವೇ ಕಾರಣರಾಗುತ್ತೀರಿ. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ, ಜೀವನದ ಕಷ್ಟಗಳನ್ನು ತಿಳಿಸಿಕೊಡಿ ಎಂದು ಕಿವಿ ಮಾತು ಹೇಳಿದರು.

ಮಾಸೂರಿನ ಶ್ರೀಮತಿ ಎಸ್.ಬಿ. ಪಾಟೀಲ್ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಕರೇಗೌಡ ಕೋಣ್ತಿ ಮಾತನಾಡಿ, ಮನುಷ್ಯ ಹುಟ್ಟಿದ ಮೇಲೆ ಸಮಾಜಕ್ಕೆ ನಮ್ಮ ಕುರುಹು ಬಿಟ್ಟು ಹೋಗುವಂತೆ ಬದುಕಬೇಕು ಎಂದರು.

ಸನ್ಮಾನಿತರಾದ ನಿವೃತ್ತ ಯೋಧ ಸಾರಥಿ ಗ್ರಾಮದ ಬಸವರಾಜ್ ಮಾತನಾಡಿ, ದೇಶ ಸೇವೆ ಮಾಡುವ ಅವಕಾಶವನ್ನು ಯಾರೂ ಕಳೆದುಕೊಳ್ಳಬೇಡಿ. ದೇಶ ಸೇವೆ ಮಾಡುವಾಗ ಕಷ್ಟವಾದರೂ ನಂತರ ಸಿಗುವ ಖುಷಿ, ತೃಪ್ತಿ ಬೇರೆ ಯಾವ ಸೇವೆಯಲ್ಲೂ ಸಿಗಲಾರದು ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

ಗ್ರಾಮದ ನಿವೃತ್ತ ಶಿಕ್ಷಕ ಜಿ.ಬಸಪ್ಪ, ಜಿ. ಆಂಜನೇಯ, ಡಿ.ರಾಜಪ್ಪ, ಹೊಸಮನಿ ಮಲ್ಲಪ್ಪ, ಬಸವನಗೌಡ ಕೋಣ್ತಿ, ಕುಂಬಳೂರಿನ ಕೆ.ಕುಬೇರಪ್ಪ, ಸದಾಶಿವ, ಸಿರಿಗೆರೆಯ ಹನುಮಂತಗೌಡ ಮತ್ತಿತರರು ಭಾಗವಹಿಸಿದ್ದರು.

ಹೊಳೆಸಿರಿಗೆರೆಯ ಭದ್ರಾ ಪಿಎಸಿಎಸ್ ಸಿಇಓ ಎಂ.ಮಲ್ಲೇಶಪ್ಪ ದಾಸೋಹ ದಾನಿಗಳಾಗಿದ್ದರು. ಹೊಳೆಸಿರಿಗೆರೆಯ ಕುಂದೂರು ಮಂಜಪ್ಪ ಅವರು ನಿವೃತ್ತ ಯೋಧರ ಪರಿಚಯ ಮಾಡಿಕೊಟ್ಟರು.

ಸಿರಿಗೆರೆ ಸಿದ್ದೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪಿಎಸಿಎಸ್ ಸಿಇಓ ಶೇಖರಪ್ಪ ಸ್ವಾಗತಿಸಿದರು.

# ಬಜೆಟ್‌ನಲ್ಲಿ ಮೂಲ ಸೌಲಭ್ಯಕ್ಕೆ ಬಲ

**(1ನೇ ಪುಟದಿಂದ)** ಸಾಗಣೆಯ ಮೂಲಭೂತ ಸೌಲಭ್ಯಗಳನ್ನು ಬೆಳವಣಿಗೆಯ ಏಳು ಪ್ರಮುಖ ಆಧಾರಗಳು ಎಂದು ಗುರುತಿಸಲಾಗಿದೆ.

ಈ ಏಳೂ ವಲಯಗಳು ಜೊತೆಯಾಗಿ ಆರ್ಥಿಕತೆಯನ್ನು ಮುಂದಕ್ಕೆ ತರಲಿವೆ. ಇದರ ಜೊತೆಗೆ ವಿದ್ಯುತ್, ಮಾಹಿತಿ ತಂತ್ರಜ್ಞಾನ, ಜಲ - ಒಳಚರಂಡಿ ವಲಯ ಹಾಗೂ ಸಾಮಾಜಿಕ ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸಲಾಗುವುದು ಎಂದು ಸೀತಾರಾಮನ್ ಹೇಳಿದ್ದಾರೆ.

ಸೀಮಾ ಸುಂಕದಲ್ಲಿ ಸುಧಾರಣೆ, ಹೊಸ ಉತ್ಪಾದನಾ ಘಟಕಗಳ ಸ್ಥಾಪನೆಗೆ ಇರುವ ಕಾಲಮಿತಿ ಹೆಚ್ಚಳ, ಡಿಜಿಟಲ್ ಹಣಕ್ಕೆ ಚಾಲನೆ ಹಾಗೂ ಕ್ರಿಪ್ಟೋ ಆಸ್ತಿಯ ಮೇಲೆ ತೆರಿಗೆ ವಿಧಿಸುವುದು ಈ ಬಾರಿಯ ಬಜೆಟ್‌ನ ಪ್ರಮುಖ ಅಂಶಗಳಾಗಿವೆ. ಕಳೆದ ವರ್ಷದಂತೆಯೇ ಈ ಬಾರಿಯೂ ಮೂಲಭೂತ ಸೌಲಭ್ಯಗಳ ವೆಚ್ಚಕ್ಕೆ ಆದ್ಯತೆ ನೀಡಲಾಗಿದೆ. 5ಜಿ ಸ್ಪೆಕ್ಟ್ರಮ್ ಹರಾಜು, ರಾಷ್ಟ್ರೀಯ ಹೆದ್ದಾರಿಯನ್ನು 25 ಸಾವಿರ ಕಿ.ಮೀ.ಗಳಿಗೆ ವಿಸ್ತರಿಸುವುದು, ನದಿಗಳ ಜೋಡಣೆ ಹಾಗೂ 400 ಹೊಸ ವಂದೇ ಭಾರತ್ ರೈಲುಗಳಿಗೆ ಚಾಲನೆ ನೀಡುವುದು ಪ್ರಮುಖ ಕ್ರಮಗಳಾಗಿವೆ.

ಆರ್ಥಿಕತೆ ವೇಗವಾಗಿ ಪುಟಿದಿರುವುದು ನಮ್ಮ ದೇಶದ ಆರ್ಥಿಕತೆಯ ಸ್ಥೈರ್ಯವನ್ನು ತೋರಿಸುತ್ತದೆ ಎಂದು ಬಜೆಟ್ ಭಾಷಣದಲ್ಲಿ ಮಾತನಾಡಿದ ಸೀತಾರಾಮನ್ ಹೇಳಿದ್ದಾರೆ. ವಿತ್ತೀಯ ಕೊರತೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಅನಿರೀಕ್ಷಿತವಾಗಿ ಶೇ.6.9ಕ್ಕೆ ಹೆಚ್ಚಾಗಿದೆ. ಇದು ಮುಂದಿನ ವರ್ಷ ಶೇ.6.4ಕ್ಕೆ ಇಳಿಯಲಿದೆ ಎಂದು ಸೀತಾರಾಮನ್ ಅಂದಾಜಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಆರ್ಥಿಕತೆ ಶೇ.9.2ರ ಬೆಳವಣಿಗೆ ಕಾಣಲಿದೆ. ಮುಂದಿನ ವರ್ಷ ಬೆಳವಣಿಗೆ ವೇಗ ಶೇ.8.5ಕ್ಕೆ ಇಳಿಯಲಿದೆ ಎಂದೂ ಬಜೆಟ್‌ನಲ್ಲಿ ಅಂದಾಜಿಸಲಾಗಿದೆ. ಸಾರಿಗೆ ಹಾಗೂ ಸಾಗಣೆ, ಬ್ಯಾಂಕಿಂಗ್ ಹಾಗೂ ಹಣಕಾಸು, ಕೃಷಿ, ಎಲೆಕ್ಟ್ರಿಕ್ ವಾಹನಗಳ ವಲಯಗಳನ್ನು ಬಲಗೊಳಿಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ನೇರ ತೆರಿಗೆದಾರರಿಗೆ ನೆರವಾಗಲು ಹೊಸ ಐ.ಟಿ. ರಿಟರ್ನ್ ವ್ಯವಸ್ಥೆ ರೂಪಿಸಲಾಗುವುದು. ಆದಾಯ ತೆರಿಗೆ ಕುರಿತ ವ್ಯಾಜ್ಯಗಳನ್ನು ಕಡಿಮೆ ಮಾಡಲು ನಿರಂತರ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಡಿಜಿಟಲ್ ಹಣಕ್ಕೆ ರಿಸರ್ವ್ ಬ್ಯಾಂಕ್ ಚಾಲನೆ ನೀಡಲಿದೆ. ಡಿಜಿಟಲ್ ಆಸ್ತಿಗಳ ಮೇಲೆ ಶೇ.30ರ ತೆರಿಗೆ ವಿಧಿಸಲಾಗುವುದು ಎಂದು ಸೀತಾರಾಮನ್ ಪ್ರಕಟಿಸಿದ್ದಾರೆ.

ಬಜೆಟ್ ಮಂಡನೆ ನಂತರ ಮಾತನಾಡಿರುವ ಸೀತಾರಾಮನ್, ಕೊರೊನಾ ಹಿನ್ನೆಲೆಯಲ್ಲಿ ಹೊಸ ತೆರಿಗೆ ಹೇರದಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಕಳೆದ ವರ್ಷ ತಿಳಿಸಿದ್ದರು ಅದರಂತೆ ಬಜೆಟ್‌ನಲ್ಲಿ ಹೊಸ ತೆರಿಗೆ ಹೇರಿಲ್ಲ ಎಂದಿದ್ದಾರೆ.

## ಬೆಳವಣಿಗೆಗೆ ಪೂರಕ

**(1ನೇ ಪುಟದಿಂದ)** ಹೆದ್ದಾರಿ, ರೈಲ್ವೆ, ಡಿಜಿಟಲ್ ಆರ್ಥಿಕತೆ ಮತ್ತು ರಾಜ್ಯಗಳಿಗೆ ಬಹು ಮಾದರಿ ಸಂಪರ್ಕಗಳ ಕ್ಷೇತ್ರದಲ್ಲಿ ಹೂಡಿಕೆಯಾಗಲಿದೆ ಎಂದು ತಿಳಿಸಿದರು.

ಜನಸಾಮಾನ್ಯರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಜೆಟ್. ಜಲಜೀವನ ಮಿಷನ್, ಆರೋಗ್ಯ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಅನುದಾನ, ಪ್ರಧಾನ ಮಂತ್ರಿ ಆವಾಸ್ ಯೋಜನೆ, ಪ್ರಧಾನ ಮಂತ್ರಿ ಸಡಕ್ ಯೋಜನೆಗೆ ಹೆಚ್ಚು ಒತ್ತು ನೀಡಲಾಗಿದೆ. ಗ್ರಾಮೀಣ ಭಾರತವನ್ನು ಸಬಲೀಕರಣಗೊಳಿಸುವ ಮಹತ್ವಾಕಾಂಕ್ಷೆಯ ಬಜೆಟ್. ಜನಸಾಮಾನ್ಯರ ನಿರೀಕ್ಷೆಗೆ ತಕ್ಕುದಾದ ಹಾಗೂ ಅವರ ಅವಶ್ಯಕತೆಗೆ ಪೂರಕವಾಗಿ ಕುಡಿಯುವ ನೀರು, ರಸ್ತೆ, ಮನೆ ನಿರ್ಮಾಣ ಮಾಡಲು ಬಹಳ ಒತ್ತು ನೀಡಿರುವ ಬಜೆಟ್ ಇದಾಗಿದೆ ಎಂದು ತಿಳಿಸಿದರು.

## ವಿನಾಶವೇ ಉದ್ದೇಶ

**(1ನೇ ಪುಟದಿಂದ)** ಒತ್ತಡಕ್ಕೆ ಮಣಿದು ಕರಾಳ ಕೃಷಿ ಕಾನೂನುಗಳನ್ನು ಕೈಬಿಟ್ಟಿರುವ ಕೇಂದ್ರ ಸರ್ಕಾರ, ಕೃಷಿ ಕ್ಷೇತ್ರದ ಅನುದಾನವನ್ನು ಕೇವಲ ರೂ.982 ಕೋಟಿ ರೂ.ಗಳಷ್ಟು ಹೆಚ್ಚಿಸಿ ರೈತರ ವಿರುದ್ಧ ಸೇಡು ತೀರಿಸಿಕೊಂಡಿದೆ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಬಜೆಟ್ ಸರ್ಕಾರದ ವಾರ್ಷಿಕ ಆದಾಯ ಮತ್ತು ಖರ್ಚಿನ ವಿವರ. ಆದರೆ ಹಣಕಾಸು ಸಚಿವರು ಮುಂದಿನ 25 ವರ್ಷಗಳ ಅಭಿವೃದ್ಧಿಯ ನಕಾಶೆಯನ್ನು ಬಿಡಿಸಲು ಪ್ರಯತ್ನಿಸಿದ್ದಾರೆ. ಭೂಮಿಗೆ ಭಾರವಾಗಿರುವ ಬಿಜೆಪಿ ಸರ್ಕಾರವನ್ನು ದೇಶದ ಜನತೆ ಕಿತ್ತೊಗೆಯಲು ಸಿದ್ಧರಾಗಿದ್ದಾರೆ. ಎಲ್ಲಿಯ 25 ವರ್ಷ? ಎಂದವರು ಪ್ರಶ್ನಿಸಿದ್ದಾರೆ.

# ಕೈಗಾರಿಕೆಗಳ ಪುನರಾರಂಭಕ್ಕೆ ಒತ್ತು ನೀಡದ ಬಜೆಟ್ : ಲತಾ



ಹರಪನಹಳ್ಳಿ, ಫೆ.1- ಕೇಂದ್ರ ಸರ್ಕಾರದ ಬಜೆಟ್ ಯಾವುದೇ ನಿರೀಕ್ಷೆ ಇಲ್ಲದ ನಿರಾಶಾದಾಯಕ ಬಜೆಟ್ ಎಂದು ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಪ್ರತಿಕ್ರಿಯಿಸಿದ್ದಾರೆ.

ಬಜೆಟ್ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕೇಂದ್ರ ಸರ್ಕಾರ ದಿವಾಳಿ ಬಜೆಟ್ ಮಂಡಿಸಿದೆ. ದೇಶದ ಇತಿಹಾಸದಲ್ಲಿ ಇಂತಹ ನಿರುತ್ಸಾಹದ ಬಜೆಟ್ ನೋಡಿಲ್ಲ. ಯಾವ ವರ್ಗಕ್ಕೂ ಸಹಾಯ ಮಾಡಿಲ್ಲ. ರೈತರ ಅಭಿವೃದ್ದಿಗೆ ಹೊಸ ಯೋಜನೆ ಪ್ರಕಟಿಸಿಲ್ಲ ಎಂದು ಟೀಕಿಸಿದ್ದಾರೆ.

ಕೋವಿಡ್ ವೇಳೆ ಹಲವು ಕೈಗಾರಿಕೆಗಳು ಮುಚ್ಚಿದ್ದವು. ಈ ಕೈಗಾರಿಕೆಗಳನ್ನು ಪುನರಾರಂಭಿಸಲು ಒತ್ತು ನೀಡಿಲ್ಲ. ಯಂತ್ರೋಪಕರಣಗಳ ಮೇಲೆ ಕೃಷಿ ಸೆಸ್ ಹಾಕಲಾಗಿದೆ. ಜನರ ವಿರುದ್ಧವಾದ ಬಜೆಟ್ ಇದಾಗಿದೆ. ಯುವಕರಿಗೆ ಉದ್ಯೋಗದ ಬಗ್ಗೆ ಏನೂ ಯೋಜನೆ ಇಲ್ಲ. ರೈತರ ರಕ್ಷಣೆಯ ಬಗ್ಗೆಯೂ ಏನೂ ಇಲ್ಲ. ಬೆಲೆ ನಿಯಂತ್ರಣ, ರಕ್ಷಣೆ ಬಗ್ಗೆ ತಿಳಿಸಿಲ್ಲ. ಸಣ್ಣಪುಟ್ಟ ರಸ್ತೆ ಬಗ್ಗೆ ಹೇಳಿದ್ದಾರಷ್ಟೆ. ಪಬ್ಲಿಕ್ ಸೆಕ್ಟರ್ ಸಂಸ್ಥೆ ಹಾಗೂ ರೈಲುಗಳನ್ನು ಮಾರಾಟಕ್ಕಿಟ್ಟಿದ್ದಾರೆ ಎಂದಿದ್ದಾರೆ.

# ರೈತ, ಕೃಷಿ ಕಾರ್ಮಿಕರ ಸರ್ವನಾಶ ಮಾಡುವ ಬಜೆಟ್ : ರವೀಂದ್ರಗೌಡ



ರಾಣೇಬೆನ್ನೂರು ಫೆ.1- ಕೇಂದ್ರದ 2022-23 ನೇ ಸಾಲಿನ ಬಜೆಟ್ ಕತ್ತೆ ಕಾಯುವ ಬಜೆಟ್ ಎನ್ನುವಂತಿದೆ ಎಂದು ರವೀಂದ್ರಗೌಡ ಎಫ್. ಪಾಟೀಲ್ ಅವರು ವ್ಯಂಗ್ಯವಾಡಿದ್ದಾರೆ.

ಕೇಂದ್ರದ ವಿತ್ತ ಸಚಿವೆ ಇಂದು ಮಂಡಿಸಿದ ಬಜೆಟ್‌ನಲ್ಲಿ ಕೃಷಿ ಉತ್ಪನ್ನಗಳ ಬೆಂಬಲ ಬೆಲೆ ಕಡಿಮೆ ಮಾಡಿರುವುದನ್ನು ನೋಡಿದರೆ, ಕೃಷಿ ಕ್ಷೇತ್ರಕ್ಕೆ ಯಾವುದೇ ಕೊಡುಗೆಗಳನ್ನು ನೀಡದೇ ಇರುವುದು ಸೇರಿದಂತೆ, ಗ್ರಾಮೀಣ ಭಾಗದ ಕೃಷಿ ಕೂಲಿ ಕಾರ್ಮಿಕರಿಗೆ ಸಾಕಷ್ಟು ಅನುಕೂಲವಾಗುತ್ತಿದ್ದ ನರೇಗಾ ಯೋಜನೆಯ ಅನುದಾನವನ್ನು ಸಾಕಷ್ಟು ಕಡಿತಗೊಳಿಸಿರುವುದನ್ನು ನೋಡಿದರೆ ರೈತರು ಮತ್ತು ಕೃಷಿ ಕಾರ್ಮಿಕರ ಮೇಲಿನ ಸಿಟ್ಟು ಮೋದಿಯವರಿಗೆ ಇನ್ನೂ ಕಡಿಮೆಯಾಗಿಲ್ಲ ಎಂದು ಎತ್ತಿ ತೋರಿಸುತ್ತದೆ.

ಪಂಚ ರಾಜ್ಯಗಳ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಸಿಲಿಂಡರ್ ಬೆಲೆಯಲ್ಲಿ ಕೇವಲ 90 ರೂ. ಕಡಿಮೆಗೊಳಿಸಿರುವುದು ಬಡಜನರಿಗೆ ಯಾವುದೇ ಪ್ರಯೋಜನವಾಗಿಲ್ಲ ಎಂದು ಅವರು ಹೇಳಿದರು.

# ಹರಿಹರೇಶ್ವರ ರಥೋತ್ಸವಕ್ಕೆ ಅನುಮತಿಗೆ ಮನವಿ



ಹರಿಹರ, ಫೆ. 1- ಶ್ರೀ ಹರಿಹರೇಶ್ವರ ಸ್ವಾಮಿ ರಥೋತ್ಸವವನ್ನು ಕೋವಿಡ್ ಮಾರ್ಗಸೂಚಿ ಅನ್ವಯ ನಡೆಸಲು ಅವಕಾಶ ನೀಡುವಂತೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಬಿ.ಪಿ.ಹರೀಶ್, ದೂಡಾ ಮಾಜಿ ಸದಸ್ಯ ರಾಜು ರೋಖಡೆ, ಚಂದ್ರಶೇಖರ, ಪತ್ರಕರ್ತ ಪಂಚಾಕ್ಷರಿ, ಹರಿಶಂಕರ ಜೋಯ್ಸ್, ರುದ್ರಗೌಡ, ಜಾಗರಣ ವೇದಿಕೆ ನಗರ ಸಂಪರ್ಕ ಪ್ರಮುಖ ಚಂದನ್ ಮೂರ್ಕಲ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಎಲೆಕ್ಟ್ರಿಕ್ ವಾಹನಗಳಿಗೆ ಬ್ಯಾಟರಿ ವಿನಿಮಯ ನೀತಿ

ನವದೆಹಲಿ, ಫೆ. 1 - ಎಲೆಕ್ಟ್ರಿಕ್ ವಾಹನಗಳಿಗೆ ಉತ್ತೇಜನ ನೀಡುವ ಸಲುವಾಗಿ ಬ್ಯಾಟರಿ ವಿನಿಮಯ ನೀತಿ ಜಾರಿಗೆ ತರಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಬಜೆಟ್ ಮಂಡನೆ ವೇಳೆ ಈ ವಿಷಯ ತಿಳಿಸಿರುವ ಅವರು, ನಗರ ಪ್ರದೇಶಗಳಲ್ಲಿ ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಘಟಕ ಸ್ಥಾಪಿಸಲು ಸ್ಥಳದ ಕೊರತೆ ಇದೆ. ಈ ಹಿನ್ನೆಲೆಯಲ್ಲಿ ಬ್ಯಾಟರಿ ವಿನಿಮಯ ನೀತಿ ಜಾರಿಗೆ ತರಲಾಗುವುದು. ಬ್ಯಾಟರಿಗಳನ್ನು ಬದಲಿಸುವ ಕುರಿತು ಏಕರೂಪದ ಮಾನದಂಡ ರೂಪಿಸಲಾಗುವುದು ಎಂದಿದ್ದಾರೆ.

ಎಲೆಕ್ಟ್ರಿಕ್ ವಾಹನಗಳ ಬ್ಯಾಟರಿ ಹಾಗೂ ಇಂಧನಕ್ಕೆ ಸಂಬಂಧಿಸಿದಂತೆ ಖಾಸಗಿ ವಲಯ ಸುಸ್ಥಿರವಾದ ಔದ್ಯಮಿಕ ಮಾದರಿಗಳನ್ನು ರೂಪಿಸಲು ಉತ್ತೇಜನ ನೀಡಲಾಗುವುದು. ಇದರಿಂದ ಎಲೆಕ್ಟ್ರಿಕ್ ವಾಹನಗಳ ವಲಯದ ದಕ್ಷತೆ ಸುಧಾರಣೆಯಾಗಲಿದೆ ಎಂದವರು ಹೇಳಿದ್ದಾರೆ.

# ಒಂದು ಎನ್ನುವ ಸಂಕಲ್ಪ ಮಾಡಬೇಕಾಗಿದೆ

**(1ನೇ ಪುಟದಿಂದ)** ಮಾತನಾಡಿ, ತನಗಾಗಿ ಎನ್ನದೇ ಇತರರಿಗಾಗಿ ಎಂದು ಕೆಲಸ ಮಾಡಿದಾಗ ಮಾತ್ರ ಸಮಾಜ ಉದ್ಧಾರ ಆಗುತ್ತದೆ. ಮಡಿವಾಳ ಮಾಚಿದೇವರಂತೆ ನಾವೆಲ್ಲರೂ ಶ್ರದ್ಧಾಭಕ್ತಿಯಿಂದ ಶರಣರ ಚಿಂತನೆಗಳನ್ನು ಮೈಗೂಡಿಸಿಕೊಂಡು ಬದುಕಬೇಕಾಗಿದೆ. ಅಂದು ವಚನ ಸಾಹಿತ್ಯಗಳನ್ನು ನಾಶ ಮಾಡಲು ಬಂದ ದುಷ್ಟರನ್ನು ಹಿಮ್ಮೆಟ್ಟಿಸಿ ಇಡೀ ವಚನ ಸಾಹಿತ್ಯಗಳನ್ನು ರಕ್ಷಿಸಿದಂತಹ ಮಹಾನ್ ವ್ಯಕ್ತಿ ಮಡಿವಾಳ ಮಾಚಿದೇವರ ಕುಲದಲ್ಲಿ ಹುಟ್ಟಿದವರು ನಾವು. ಆ ಬಗ್ಗೆ ಹೆಮ್ಮೆ ಪಡಬೇಕಾಗಿದೆ. ಅದರಂತೆ ನಾವೂ ಕೂಡ ಸರ್ವರೊಂದಿಗೂ ಬೆರೆದು ಸಮಾಜದ ಹೊರಗಿನ ಕೊಳೆ ತೊಳೆಯುವ ಜೊತೆಗೆ ಆಂತರಿಕ ಕೊಳಕನ್ನು ತೊಳೆಯಲು ಮುಂದಾಗಬೇಕಿದೆ ಎಂದು ಕರೆ ನೀಡಿದರು.

ಸಮಾರಂಭದಲ್ಲಿ ಜಿಲ್ಲಾ ರಕ್ಷಣಾಧಿಕಾರಿ ಸಿ.ಬಿ. ರಿಷ್ಯಂತ್, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಜಿಲ್ಲಾ ಪಂಚಾಯತಿ ಉಪಕಾರ್ಯದರ್ಶಿ ಬಿ. ಆನಂದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ರೇಷ್ಮಾ ಕೌಸರ್, ಮಡಿವಾಳ ಸಮಾಜದ ಜಿಲ್ಲಾ ಅಧ್ಯಕ್ಷ ಎಂ. ನಾಗೇಂದ್ರಪ್ಪ, ಓಂಕಾರಪ್ಪ, ಪತ್ರಕರ್ತ ಎಂ.ವೈ. ಸತೀಶ್, ನಾಗಮ್ಮ ಪಿ. ಮಂಜುನಾಥ್, ಯರಬಳ್ಳಿ ಉಮಾಪತಿ, ಕಿಶೋರ್ ಕುಮಾರ್, ರವಿ ಚಿಕ್ಕಣ್ಣ, ಎಂ.ಆರ್. ಧನಂಜಯ್, ಯೋಗಪಟು ಪರಶುರಾಮ್, ಜಿ. ಅಜಯ ಕುಮಾರ್, ಪೂಜಾರ್ ಅಂಜಿನಪ್ಪ, ಫಕ್ಕೀರಪ್ಪ, ರವಿಕುಮಾರ್, ಎಂ ರಾಜು ಉಪಸ್ಥಿತರಿದ್ದರು.

# ಕೇಂದ್ರ ಬಜೆಟ್‌ಗೆ ಮಿಶ್ರ ಪ್ರತಿಕ್ರಿಯೆ

## ಸಾವಯವ ಕೃಷಿಗೆ ಒತ್ತು ಸ್ವಾಗತಾರ್ಹ

ಕೃಷಿ ವಲಯದಲ್ಲಿ ನೈಸರ್ಗಿಕ ಕೃಷಿಯನ್ನು ಉತ್ತೇಜಿಸಲು ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯ ಚಟುವಟಿಕೆಗಳನ್ನು ಗುರುತಿಸುವಿಕೆ, ಶೂನ್ಯ ಬಂಡವಾಳ, ಸಾವಯವ ಕೃಷಿಗೆ ಒತ್ತು ನೀಡಿರುವುದು ಸ್ವಾಗತಾರ್ಹ.

ಸಿರಿಧಾನ್ಯಗಳ ಮೌಲ್ಯವರ್ಧನೆಗೆ ಉತ್ತೇಜನ ನೀಡಿರುವುದು ಬೆಲೆ ಸ್ಥಿರತೆಗೆ ಅನುಕೂಲವಾಗುವುದು. ಕೃಷಿ ಚಟುವಟಿಕೆಗಳಾದ ಸಿಂಪರಣೆ ಮತ್ತು ಜಮೀನಿನ ಸರ್ವೆ ಗೆ ಡ್ರೋಣ್ ಬಳಕೆ ಉತ್ತಮ ಆವಿಷ್ಕಾರ. ರೈತ ಉತ್ಪಾದಕ ಕಂಪನಿಗಳಿಗೆ, ಕೃಷಿ ಸಂಸ್ಕರಣೆಗೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆಗೆ ನಬಾರ್ಡ್ ಯೋಜನೆ ಅಡಿ ಅನುದಾನ ನೀಡಿರುವುದು ಇವುಗಳ ಬೆಳವಣಿಗೆಗೆ ಸಹಾಯವಾಗಲಿದೆ.

ರೈತರ ಆದಾಯ ದ್ವಿಗುಣ ಗೊಳಿಸುವ ನಿಟ್ಟಿನಲ್ಲಿ ಹೊಸ ಹೊಸ ತಂತ್ರಜ್ಞಾನಗಳ ಅಳವಡಿಕೆಗೆ, ಸೂಕ್ತ ಬೆಂಬಲ ಬೆಲೆ ಮತ್ತು ಮಾರುಕಟ್ಟೆ ವ್ಯವಸ್ಥೆ, ಕೃಷಿ ಉತ್ಪನ್ನಗಳ ರಫ್ತಿಗೆ, ಸೆಕೆಂಡರಿ ಅಗ್ರಿಕಲ್ಚರ್ ಉತ್ತೇಜನಕ್ಕೆ ಇನ್ನೂ ಉತ್ತಮವಾದ ಯೋಜನೆಗಳನ್ನು ರೂಪಿಸಬಹುದಾಗಿತ್ತು.



**- ಎಂ.ಜಿ. ಬಸವನಗೌಡ,**
ತೋಟಗಾರಿಕೆ ವಿಜ್ಞಾನಿಗಳು, ಐಸಿಎಆರ್ - ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ.

## ಆದಾಯ ತೆರಿಗೆಯಲ್ಲಿ ಮಾರ್ಪಾಡಿಲ್ಲ

ಕೇಂದ್ರ ಸರ್ಕಾರದ ಮುಂಗಡ ಪತ್ರ ಶ್ರೀ ಸಾಮಾನ್ಯನಿಗೆ ನಿರಾಶಾದಾಯಕವಾಗಿದ್ದು, ಆದಾಯ ತೆರಿಗೆಯಲ್ಲಿ ಯಾವುದೇ ರೀತಿಯ ಮಾರ್ಪಾಡುಗಳನ್ನು ಮಾಡದೇ ಇರುವುದು ಮಧ್ಯಮ ವರ್ಗದ ಮತ್ತು ಸಂಬಳದಾರರಿಗೆ ಅನಾನುಕೂಲವಾಗಿರುತ್ತದೆ. ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಮಾತ್ರ ಸಹಾಯ ಮಾಡಿದ್ದು ಅದೇ ರೀತಿ ಧಾರವಾಡದಲ್ಲಿರುವ ಆಸ್ಪತ್ರೆಗೂ ಸಹಾಯ ಮಾಡಬಹುದಾಗಿತ್ತು.

ರಕ್ಷಣಾ ಇಲಾಖೆ ಮತ್ತು 5ಜಿ ತರಂಗಾಂತರದ ಬಿಡಿ ಭಾಗಗಳನ್ನು ದೇಶದಲ್ಲಿ ಶೇ. 69 ಉತ್ಪಾದನೆ ಕೊಟ್ಟಿರುವುದು ಮೇಕ್-ಇನ್-ಇಂಡಿಯಾದ ಶುಭ ಸೂಚನೆ ಮತ್ತು ನಿರುದ್ಯೋಗಿಗಳಿಗೆ ಆಶಾದಾಯಕ ಮತ್ತು ಡಿಜಿಟಲೈಸೇಶನ್ ಬ್ಯಾಂಕಿಂಗ್ ಸೆಕ್ಟರ್ ತಂದಿರುವುದು ಶ್ರೀಸಾಮಾನ್ಯನಿಗೆ ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ತಿಳುವಳಿಕೆ ಮೂಡಿಸುವುದು ಅತ್ಯಗತ್ಯವಾಗಿರುತ್ತದೆ.

ಜಿ.ಎಸ್.ಟಿ ಯಲ್ಲಿ ಯಾವುದೇ ರೀತಿಯ ಬದಲಾವಣೆ ಇರುವುದಿಲ್ಲ. ಕಳ್ಳತನದಿಂದ ನಡೆಯುತ್ತಿದ್ದ ಕ್ರಿಪ್ಟೋ ಕರೆನ್ಸಿಯನ್ನು ತಡೆಗಟ್ಟಲು ಆರ್.ಬಿ.ಐ ನಿಂದ ಡಿಜಿಟಲ್ ಕರೆನ್ಸಿ ಬಿಡುಗಡೆ ಮಾಡುತ್ತಿರುವುದು ಸೂಕ್ತವಾಗಿದೆ.



**- ಜಂಬಗಿ ರಾಧೇಶ್,** ಅಧ್ಯಕ್ಷರು,
ತೆರಿಗೆ ಸಲಹೆಗಾರರ ಸಂಘ, ದಾವಣಗೆರೆ.

## ಅನ್ನದಾತನನ್ನು ಕಡೆಗಣಿಸಿದ ಬಜೆಟ್

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಬಜೆಟ್ ಎಂದಿನಂತೆ ದೇಶದ ಅನ್ನದಾತನನ್ನು ಕಡೆಗಣಿಸಿರುವಂತೆ ಭಾಸವಾಗಿದೆ.

ಭಾರತ ಹಳ್ಳಿಗಳಿಂದ ಕೂಡಿದ ದೇಶ, ರೈತನೇ ಈ ದೇಶದ ಬೆನ್ನೆಲುಬು ಎಂದು ಪುಂಖಾನುಪುಂಖ ಭಾಷಣಗಳು ಬಜೆಟ್ ಮುಂದೆ ಸೊರಗಿವೆ. ರೈತರ ಖಾತೆಗೆ ಪ್ರತಿವರ್ಷ 6 ಸಾವಿರ ರೂಪಾಯಿ ನೀಡುವ ಕಿಸಾನ್ ಸಮ್ಮಾನ್ ಮತ್ತೆ ಮುಂದುವರೆದಿರುವುದು ಬಿಟ್ಟರೆ ಬೇರೆ ಏನೂ ಸತ್ವ ಇಲ್ಲ. ರೈತರ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡಿ ಖರೀದಿಸುವ ಯಾವುದೇ ಪ್ರಸ್ತಾಪ ಮಾಡಲಾಗಿಲ್ಲ.

ಡಿಜಿಟಲೀಕರಣಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಆಹಾರ ಭದ್ರತೆ, ರಸಗೊಬ್ಬರ, ಬೆಳೆ ವಿಮೆ, ಪೌಷ್ಟಿಕಾಂಶ ಆಧಾರಿತ ಉತ್ಪನ್ನಗಳ ಮೇಲಿನ ಸಹಾಯಧನ ಹಾಗೂ ಅನುದಾನ ಕಡಿತ ಮಾಡಿರುವುದು ಅಘಾತಕಾರಿ ಸಂಗತಿ. ನರೇಗಾ ಯೋಜನೆ ಅನುಷ್ಠಾನದಲ್ಲಿ ಲೋಪವಿದ್ದಲ್ಲಿ ಸರಿಪಡಿಸುವುದನ್ನು ಬಿಟ್ಟು 25 ಸಾವಿರ ಕೋಟಿ ರೂ., ಅನುದಾನ ಕಡಿಮೆ ಮಾಡಲಾಗಿದೆ.

ಕಾರ್ಪೊರೇಟ್ ವಲಯಗಳು ಈ ಬಜೆಟ್‌ನಲ್ಲಿ ಹಬ್ಬ ಆಚರಿಸಿಕೊಂಡಿವೆ. ಬಡವರು ಬಳಸುವ ಛತ್ರಿ ಮೇಲೆ ತೆರಿಗೆ, ಶ್ರೀಮಂತರು ಬಳಸುವ ವಜ್ರದ ಮೇಲೆ ಸುಂಕ ಕಡಿತ ಮಾಡಲಾಗಿದೆ. ನಿರುದ್ಯೋಗ ಬಡತನ ಇದೀಗ ಹೆಚ್ಚಿದೆ. ಇಂತಹ ಕೋವಿಡ್ ಕಾಲದಲ್ಲಿ ಶ್ರೀಮಂತರಿಗೆ ಏಕೆ ಹೆಚ್ಚು ತೆರಿಗೆ ವಿಧಿಸಿಲ್ಲ?



**- ಎಲ್.ಹೆಚ್. ಅರುಣ್‌ಕುಮಾರ್,** ಹಿರಿಯ ನ್ಯಾಯವಾದಿ

## ಬಡವರು ಇನ್ನೂ ಬಡವರಾಗಿದ್ದಾರೆ

ಬಡವರ ನಿರೀಕ್ಷೆಯನ್ನು ಹುಸಿಗೊಳಿಸಿದ ಬಜೆಟ್. ಈ ಬಜೆಟ್‌ನಲ್ಲಾದರೂ ಬಡವರಿಗೆ ಉಪಯೋಗವಾಗುತ್ತದೆ ಎಂದು ಕಾಯುತ್ತಿದ್ದ ಜನರಿಗೆ ಯಾವುದೇ ಉಪಯೋಗವಿಲ್ಲದ ಬಜೆಟ್ ಮಂಡಿಸಿದ ಸರ್ಕಾರ.

ಕೊರೊನಾದಿಂದ ಈ ಎರಡು ವರ್ಷಗಳಲ್ಲಿ ಸಂಕಷ್ಟ ಅನುಭವಿಸಿದ ರೈತರಿಗೆ, ಮಧ್ಯಮ ವರ್ಗದವರಿಗೆ, ವಿದ್ಯಾರ್ಥಿಗಳಿಗೆ ಟ್ಯಾಕ್ಸಿ ಡ್ರೈವರ್, ಆಟೋ ಚಾಲಕರು ದಿನಗೂಲಿ ನೌಕರರಿಗೆ ಯಾವುದೇ ರೀತಿಯ ಸಹಾಯವಿಲ್ಲದ ಬಜೆಟ್. ಕರ್ನಾಟಕಕ್ಕೆ ಯಾವುದೇ ವಿಶೇಷವಾದ ಕೊಡುಗೆ ಇಲ್ಲದ ಬಜೆಟ್. ಕರ್ನಾಟಕದ ಇಪ್ಪತ್ತೈದು ಸಂಸದರು ಕರ್ನಾಟಕಕ್ಕೆ ಯಾವುದೇ ವಿಶೇಷ ಅನುಕೂಲ ಮಾಡಿಕೊಡುವಲ್ಲಿ ವಿಫಲರಾಗಿದ್ದು ಇಂತಹ ಸಂಸದರನ್ನು ಆರಿಸಿರುವುದು ಕರ್ನಾಟಕದ ಜನತೆಯ ದುರ್ದೈವ.



**- ದಿನೇಶ್ ಕೆ ಶೆಟ್ಟಿ,** ಪ್ರಧಾನ ಕಾರ್ಯದರ್ಶಿ,
ಜಿಲ್ಲಾ ಕಾಂಗ್ರೆಸ್

## ಮೋದಿ ಲೆಕ್ಕ ಹಳಿ ತಪ್ಪಿದೆ

ಮೋದಿ ಸರ್ಕಾರದ ಈ ಬಾರಿಯ ಬಜೆಟ್ ಬಡವರು, ರೈತರು, ಕಾರ್ಮಿಕರು, ಮಧ್ಯಮ ವರ್ಗದವರಿಗೆ ಯಾವುದೇ ಯೋಜನೆಗಳನ್ನು ಪ್ರಕಟಿಸದೇ ನಿರಾಸೆ ಮಾಡಿದ್ದಾರೆ.

60 ಲಕ್ಷ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದು ಸುಳ್ಳು ಭರವಸೆ ನೀಡುತ್ತಾ ಬಂದಿದ್ದಾರೆ. ರಾಜ್ಯ ಸರ್ಕಾರಕ್ಕೆ ನೀಡಬೇಕಾದ ನ್ಯಾಯಯುತ ಜಿ.ಎಸ್.ಟಿ. ಹಣವನ್ನು ಸಹ ನೀಡದೆ ಸುಳ್ಳು ಭರವಸೆ ನೀಡಿರುವುದು ಹಾಸ್ಯಾಸ್ಪದ ಸಂಗತಿ.

ಕೋವಿಡ್ ಸಂಕಷ್ಟದಿಂದಾಗಿ ಲಕ್ಷಾಂತರ ಬಡವರು ಜೀವ ತೆತ್ತಿದ್ದಾರೆ. ಸಾವಿರಾರು ಕುಟುಂಬಗಳು ನಾಶವಾಗಿವೆ. ಕನಿಷ್ಠ ಅಂತಹ ಕುಟುಂಬಗಳಿಗೂ ಸಹ ಪರಿಹಾರ ಘೋಷಿಸಿಲ್ಲ. ಇದೊಂದು ನಿರ್ಜೀವ ಸರ್ಕಾರವಾಗಿದೆ. ಮೋದಿ ಅಧಿಕಾರಕ್ಕೆ ಬಂದ ಏಳು ವರ್ಷಗಳಲ್ಲಿ ದೇಶದಲ್ಲಿ ಬಡತನ ರೇಖೆಗಿಂತ ಕೆಳಗೆ 22 ಕೋಟಿ ಜನ ಹೋಗಿದ್ದಾರೆ. ಇದು ಮೋದಿ ಸರ್ಕಾರದ ಗುಟ್ಟು ಎಂದು ಟೀಕಿಸಿದ್ದಾರೆ.



**-ಡಿ. ಬಸವರಾಜ್,** ಕೆಪಿಸಿಸಿ ವಕ್ತಾರ

## ಅಭಿವೃದ್ಧಿಗೆ ವೇಗ ನೀಡುವ ಬಜೆಟ್

**(1ನೇ ಪುಟದಿಂದ)** ಸೆಳೆಯುತ್ತವೆ. ಒಟ್ಟಾರೆಯಾಗಿ ಇದೊಂದು ಅಭಿವೃದ್ದಿಗೆ ವೇಗ ನೀಡುವ ವೇಗವರ್ಧಕ ಬಜೆಟ್ ಇದಾಗಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಮಡಿವಾಳ ಸಮುದಾಯವನ್ನು ಪರಿಶಿಷ್ಟರ ಪಟ್ಟಿಗೆ ಸೇರಿಸಲು ಆಗ್ರಹ

ದಾವಣಗೆರೆ, ಫೆ.1- ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಆಗ್ರಹಿಸಿ, ನಗರದಲ್ಲಿ ಇಂದು ಜಿಲ್ಲಾ ಶ್ರೀ ಮಡಿವಾಳ ಮಾಚಿದೇವ ಸಂಘವು ರಾಜ್ಯ ಸರ್ಕಾರವನ್ನು ಒತ್ತಾಯಿಸಿತು.

ಶ್ರೀ ಮಡಿವಾಳ ಮಾಚಿದೇವ ಸಮುದಾಯ ಭವನದಿಂದ ಜಿಲ್ಲಾಧಿಕಾರಿ ಕಚೇರಿಗೆ ತೆರಳಿದ ಸಂಘದ ಪದಾಧಿಕಾರಿಗಳು, ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಕರ್ನಾಟಕದಲ್ಲಿ ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಲು 'ಕುಲ ಶಾಸ್ತ್ರೀಯ ಅಧ್ಯಯನ' ನಡೆಸಿ, ವರದಿ ಸಲ್ಲಿಸಲು ಮೈಸೂರು ವಿಶ್ವವಿದ್ಯಾಲಯದ ಪ್ರೊ|| ಡಾ. ಅನ್ನಪೂರ್ಣಮ್ಮ ಅವರನ್ನು ನೇಮಕ ಮಾಡಲಾಗಿತ್ತು. ಅಂತೆಯೇ ಅವರು ತಮ್ಮ ವರದಿಯನ್ನು 2010ರಲ್ಲಿಯೇ ಸರ್ಕಾರಕ್ಕೆ ಸಲ್ಲಿಸಿದ್ದು, ಅದರಲ್ಲಿ 'ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಬೇಕು' ಎಂಬುದಾಗಿ ಶಿಫಾರಸ್ಸು ಮಾಡಿದ್ದಾರೆ. ಸರ್ಕಾರಕ್ಕೆ ವರದಿ ಸಲ್ಲಿಸಿ 11 ವರ್ಷಗಳಾದರೂ ನಮ್ಮನ್ನು ಪರಿಶಿಷ್ಟರ ಪಟ್ಟಿಗೆ ಸೇರಿಸದಿರುವುದು ವಿಷಾದನೀಯ ಎಂದರು.



ಮಡಿವಾಳ (ದೋಭಿ - ರಜಕ) ಜಾತಿಯನ್ನು ದೇಶದ 18 ರಾಜ್ಯಗಳಲ್ಲಿ ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿಯಲ್ಲಿ ಸೇರ್ಪಡೆ ಮಾಡಿದ್ದಾರೆ. ಒಂದು ಪ್ರದೇಶದಲ್ಲಿ ಪರಿಶಿಷ್ಟ ಜಾತಿಯಲ್ಲಿರುವವರು ದೇಶಾದ್ಯಂತ ಒಂದೇ ತೆರನಾಗಿ ಇರಬೇಕಾದುದು ಸಂವಿಧಾನಾತ್ಮಕವಾಗಿದೆ. ಕಾರಣ ನಮ್ಮದು ನ್ಯಾಯಯುತ ಬೇಡಿಕೆಯಾಗಿದೆ. ಅಲ್ಲದೇ ಸಾಮಾಜಿಕ ನ್ಯಾಯಪರವಾದದ್ದಾಗಿದೆ ಎಂದರು.

ದೇಶಾದ್ಯಂತ ಬಟ್ಟೆ ತೊಳೆಯುವ ಮಡಿವಾಳರು ಎಲ್ಲರೂ ಒಂದೇ ತೆರನಾಗಿದ್ದಾರೆ. ದೇಶದಲ್ಲಿ ರಾಜ್ಯವಾರು ಭಾಷೆಗಳ ಅನುಸಾರ ದೋಭಿ, ರಜಕ, ಅಗಸ, ಮಡಿವಾಳ, ಪರೀಟ, ಚಾಕಲ, ಮಣ್ಣನ್, ಸಾಕಲ, ವಣ್ಣನ್, ವೆಲ್ಲುತೇಡನ್, ಸಾಕಲವಾಡು ಎಂಬುದಾಗಿ ಕರೆಯುತ್ತಾರೆ. ಅಲ್ಲದೇ ಅಗಸ ಹಾಗೂ ದೋಬಿ ಅಸ್ಪೃಶ್ಯರು ಎಂದು ವಿದ್ವಾಂಸ ಅಪಾರಕನ ಸಮವರ್ತನೆ ಸ್ಮೃತಿಯಲ್ಲಿ ವಿವರಿಸಲಾಗಿದೆ ಎಂದು ಮಾಹಿತಿ ನೀಡಿದರು.

> **"ಪರಕೆಯಿಂದ ಮಲ ಮೂತ್ರಗಳನ್ನು ತೊಳೆಯುವವರು ಪರಿಶಿಷ್ಟ ಜಾತಿಯಲ್ಲಿದ್ದಾರೆ. ಅದೇ ಮಲ ಮೂತ್ರಗಳಿಂದ ಕೂಡಿದ ಬಟ್ಟೆಗಳನ್ನು ಕೈಯಿಂದ ತೊಳೆಯುವ ಮಡಿವಾಳರನ್ನು ಪರಿಶಿಷ್ಟರ ಪಟ್ಟಿಗೆ ಸೇರಿಸಿಲ್ಲ. ಕಾರಣ ಮಡಿವಾಳರನ್ನು ಪರಿಶಿಷ್ಟ ಜಾತಿಗೆ ಸೇರಿಸುವುದು ನ್ಯಾಯೋಚಿತವಾಗಿದೆ. ಹೆರಿಗೆ - ಮುಟ್ಟು - ಸಾವು - ರೋಗ, ರುಜಿನು - ಕೀವು ರಕ್ತಸಿಕ್ತ ಮೈಲಿಗೆಯಂತಹ ಎಲ್ಲಾ ವರ್ಗದ ಬಟ್ಟೆಗಳನ್ನು ಕೈಯಿಂದ ತೊಳೆಯುತ್ತಾರೆ. ಆದರೂ ಗ್ರಾಮಾಂತರ ಪ್ರದೇಶದಲ್ಲಿ ಸಹ ಪಂಕ್ತಿ ಭೋಜನ, ಮನೆಗಳಲ್ಲಿ, ದೇವಸ್ಥಾನಗಳಲ್ಲಿ, ಬಾವಿ, ಕೆರೆಗಳಲ್ಲಿ, ಸಾಮಾಜಿಕ ಕಾರ್ಯಕ್ರಮಗಳಲ್ಲಿ, ಧಾರ್ಮಿಕ ಉತ್ಸವಾದಿಗಳಲ್ಲಿ, ಮಂಗಲ ಕಾರ್ಯಗಳಲ್ಲಿ ಮಡಿವಾಳರಿಗೆ ಅಸ್ಪೃಶ್ಯತೆ ಇದೆ.**
> **-ಮಡಿವಾಳ ಸಮಾಜದ ಮುಖಂಡರು**

ಮೇಲ್ಜಾತಿಯವರಿಗೆ ಇರುವಂತೆ ಸಾಮಾಜಿಕ ಗೌರವ ಬೆಂಬಲಗಳಿಲ್ಲದೇ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಇರುವ ಶಾಸನ - ಕಾನೂನು ಬದ್ಧ ಅವಕಾಶ - ಸೌಲಭ್ಯಗಳಿಲ್ಲದೇ ಉಭಯ ಸಂಕಟದ ಅಸಹಾಯಕ ಸ್ಥಿತಿಯಲ್ಲಿ ಮಡಿವಾಳ ಜನಾಂಗವಿದೆ. ಊರ ಹೊರಗಿದ್ದು ಅನುಭವಿಸುವ ಮಾನಸಿಕ ಕೀಳರಿಮೆಗಿಂತಲೂ ಊರ ಒಳಗಿರುವ ಅಸ್ಪೃಶ್ಯತೆ ಮಾನಸಿಕ ಯಾತನೆ ತೀವ್ರ ಹಾಗೂ ಅಪಮಾನದಿಂದ ಕೂಡಿದ್ದು, ಮಡಿವಾಳರು ಇದನ್ನು ಅನುಭವಿಸುತ್ತಿದ್ದಾರೆ ಎಂದು ಮನವಿ ಪತ್ರದಲ್ಲಿ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಗಿದೆ.

ಈ ವೇಳೆ ಜಿಲ್ಲಾ ಸಂಘದ ಅಧ್ಯಕ್ಷ ಎಂ. ನಾಗೇಂದ್ರಪ್ಪ, ಕಾರ್ಯಾಧ್ಯಕ್ಷ ಹೆಚ್.ಜಿ. ಉಮೇಶ್ ಆವರಗೆರೆ, ಪ್ರಧಾನ ಕಾರ್ಯದರ್ಶಿ ಓಂಕಾರಪ್ಪ, ಖಜಾಂಚಿ ಎಂ.ಸುರೇಶ್ ಕೋಗುಂಡೆ, ಉಪಾಧ್ಯಕ್ಷರಾದ ಪಿ.ಮಂಜುನಾಥ್, ಜಿ.ವಿಜಯಕುಮಾರ್, ಡೈಮಂಡ್ ಮಂಜುನಾಥ್, ಸಹಕಾರ್ಯದರ್ಶಿ ಆರ್.ಎನ್.ಧನಂಜಯ, ತಾಂತ್ರಿಕ ಸಲಹೆಗಾರ ಎಂ.ನಾಗರಾಜ್, ಮಾಧ್ಯಮ ಸಲಹೆಗಾರ ಎಂ.ವೈ.ಸತೀಶ್, ಸಂಘಟನಾ ಕಾರ್ಯದರ್ಶಿಗಳಾದ ಅಂಜಿನಪ್ಪ ಪೂಜಾರ್, ಬಿ.ಅಜಯ್, ಸಂಚಾಲಕರಾದ ಎಂ.ರುದ್ರೇಶ್ ನಿರ್ದೇಶಕರಾದ ರವಿ ಚಿಕ್ಕಣ್ಣ, ಪರಶುರಾಮ್, ಎಂ.ಎನ್.ಹುಚ್ಚಪ್ಪ, ಫಕ್ಕೀರಸ್ವಾಮಿ, ಎಂ.ಸುಭಾಷ್, ನಾಗಮ್ಮ ಎಂ.ರವಿ ಸೇರಿದಂತೆ ಇತರರು ಇದ್ದರು.

## ಧಾರ್ಮಿಕ ಸಂಪ್ರದಾಯ ಹತ್ತಿಕ್ಕುವ ಸರ್ಕಾರದ ಕ್ರಮಕ್ಕೆ ಶ್ರೀರಾಮ ಸೇನೆ ಖಂಡನೆ

ದಾವಣಗೆರೆ, ಫೆ.1- ಕೋವಿಡ್ ನೆಪದಲ್ಲಿ ಜಾತ್ರೆ, ಉತ್ಸವ ಸೇರಿದಂತೆ ಈ ನಾಡಿನ ಸಂಪ್ರದಾಯಗಳನ್ನು ಹತ್ತಿಕ್ಕುವ ರಾಜ್ಯ ಸರ್ಕಾರದ ಕ್ರಮವನ್ನು ಶ್ರೀರಾಮ ಸೇನೆ ಖಂಡಿಸುತ್ತದೆ ಎಂದು ಸೇನೆಯ ರಾಜ್ಯಾಧ್ಯಕ್ಷ ಗಂಗಾಧರ ಕುಲಕರ್ಣಿ ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಹುತೇಕ ಕೋವಿಡ್ ನಿಯಮಗಳನ್ನು ವಾಪಾಸ್ ಪಡೆಯಲಾಗಿದೆ. ಆದರೆ ಜಾತ್ರೆ, ಉತ್ಸವ ಸೇರಿದಂತೆ, ಧಾರ್ಮಿಕ ಆಚರಣೆಗಳಿಗೆ ಮಾತ್ರ ನಿರ್ಬಂಧ ಹೇರಿರುವುದು ಎಷ್ಟರಮಟ್ಟಿಗೆ ಸರಿ? ಎಂದು ಪ್ರಶ್ನಿಸಿದರು.

ಮಕರ ಸಂಕ್ರಾಂತಿ ನಂತರವೇ ಈ ನಾಡಿನ ಪ್ರಮುಖ ಧಾರ್ಮಿಕ ಕ್ಷೇತ್ರಗಳಲ್ಲಿ ರಥೋತ್ಸವ, ಜಾತ್ರೆ, ಉತ್ಸವಗಳು ಸಂಪ್ರದಾಯದಂತೆ ನಡೆದುಕೊಂಡು ಬರುತ್ತಿವೆ. ಆದರೆ ಸರ್ಕಾರ ಹಿಂದೂ ಸಂಪ್ರದಾಯದಂತೆ ನಡೆಯುವ ಧಾರ್ಮಿಕ ಆಚರಣೆಗಳ ಮೇಲೆ ಸವಾರಿ ಮಾಡುತ್ತಿರುವುದು ಖಂಡನೀಯ ಎಂದರು.

ಜಾತ್ರೆ, ಉತ್ಸವಗಳು ಕೇವಲ ಆಚರಣೆ ಮಾತ್ರವಲ್ಲ. ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ, ವ್ಯಾಪಾರಸ್ಥರಿಗೆ, ಕಲಾವಿದರುಗಳ ಹೊಟ್ಟೆಪಾಡಿನ ವಿಚಾರವಾಗಿದೆ. ಮಹಿಳೆಯರು ಸೇರಿದಂತೆ ಅನೇಕರು ವ್ಯಾಪಾರವನ್ನೇ ನಂಬಿ ಜೀವನ ನಡೆಸುತ್ತಿದ್ದಾರೆ. ಇವರಿಗೆ ನಿರ್ಬಂಧ ಹೇರಿದರೆ ಜೀವನ ನಿರ್ವಹಣೆ ಕಷ್ಟವಾಗುತ್ತದೆ ಎಂದರು.

ನಿರ್ಬಂಧ ಹಿಂಪಡೆಯದಿದ್ದರೆ ಇದೇ ದಿನಾಂಕ 4 ರಂದು ವ್ಯಾಪಾರಸ್ಥರು, ಭಕ್ತರು, ಸಾರ್ವಜನಿಕರ ಸಹಕಾರದೊಂದಿಗೆ ಶ್ರೀರಾಮ ಸೇನೆ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಜ್ಞಾನ ಮಂದಿರಗಳಲ್ಲಿ ಕೋಮುವಾದವನ್ನು ಬಿತ್ತುತ್ತಿರುವುದನ್ನು ಶ್ರೀರಾಮ ಸೇನೆ ಉಗ್ರವಾಗಿ ಖಂಡಿಸುತ್ತದೆ. ಹಿಜಾಬ್ ಪ್ರಕರಣಕ್ಕೆ ಕಾರಣರಾದವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಕರಾವಳಿ ಭಾಗದಲ್ಲಿ ಎಸ್‌ಡಿಪಿಐ, ಪಿಎಫ್‌ಐ ಸಂಘಟನೆಗಳು ವ್ಯಾಪಕವಾಗಿ ಬೆಳೆಯುತ್ತಿರುವುದಕ್ಕೆ ಈ ಸ್ಥಿತಿ ಕಾರಣವಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಣಿ ಸರ್ಕಾರ್, ಪರಶುರಾಮ್ ನಡುಮನಿ, ಆಲೂರು ರಾಜಶೇಖರ್, ರಾಹುಲ್ ಬೊಮ್ಮ ರಾಜು, ಶ್ರೀಧರ್ ಉಪಸ್ಥಿತರಿದ್ದರು.

## ಮರಾಠ ಪರಿಷತ್‌ನಿಂದ ನೊಂದವರಿಗೆ ಚೆಕ್ ವಿತರಣೆ



ದಾವಣಗೆರೆ, ಫೆ. 1- ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ (ಬೆಂಗಳೂರು) ಕೇಂದ್ರ ಸಮಿತಿಯಿಂದ ನಗರದ ಅಂಗವಿಕಲರಿಗೆ, ವೃದ್ಧರಿಗೆ, ವಿದ್ಯಾರ್ಥಿಗಳಿಗೆ ವಿಧವಾ ವೇತನದ ಚೆಕ್‌ಗಳನ್ನು ವಿತರಿಸಲಾಯಿತು.

ಕೇಂದ್ರ ಸಮಿತಿಯ ಅಧ್ಯಕ್ಷ ಸುರೇಶರಾವ್ ಸಾಠೆ, ಛೇರ್ಮನ್ ರಾಣೋಜಿರಾವ್ ಸಾಠೆ, ಖಜಾಂಚಿಗಳಾದ ವೆಂಕಟರಾವ್ ಚೌಹಾಣ್, ಎಸ್.ಆರ್. ಶಿಂಧೆ, ನಾಗೇಶ್‌ರಾವ್ ವನ್ಸೆ ಅವರುಗಳಿಗೆ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಜಿ.ಹೆಚ್. ಮರಿಯೋಜಿರಾವ್ ಕೃತಜ್ಞತೆ ಸಲ್ಲಿಸಿದರು.

ಜಿಲ್ಲಾ ಉಪಾಧ್ಯಕ್ಷ ಕೃಷ್ಣರಾವ್ ಸಾವಂತ್, ಪ್ರಧಾನ ಕಾರ್ಯದರ್ಶಿ ಚೇತನ್‌ಕುಮಾರ್, ಸಹ ಕಾರ್ಯದರ್ಶಿ ಗೋಪಾಲರಾವ್ ಸಾವಂತ್, ಜಿಲ್ಲಾ ನಿರ್ದೇಶಕ ಜಿ.ಎಂ. ಮಾರುತಿ ರಾವ್, ನಗರ ಘಟಕದ ಅಧ್ಯಕ್ಷ ಹನುಮಂತ ರಾವ್ ಸುರ್ವೆ, ಜಿಲ್ಲಾ ಘಟಕದ ಮಹಿಳಾ ಅಧ್ಯಕ್ಷರಾದ ವೀಣಾ ಮೋರೆ, ಪ್ರಧಾನ ಕಾರ್ಯದರ್ಶಿಗಳಾದ ವಿಜಯಲಕ್ಷ್ಮಿ ಉದಯ್, ಕಮಲಾಕ್ಷಿ ಪಿಸಾಳೆ, ಶ್ರೀನಿವಾಸ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ಇಂದು ಬ್ಯೂಟಿಪಾರ್ಲರ್ ತರಬೇತಿ

ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಯಿಂದ ಮಹಿಳೆಯರಿಗಾಗಿ 30 ದಿನ ಬ್ಯೂಟಿ ಪಾರ್ಲರ್ ಮ್ಯಾನೇಜ್‌ಮೆಂಟ್ ತರಬೇತಿ ಇಂದಿನಿಂದ ನಡೆಯಲಿದೆ. ಸಂಪರ್ಕಿಸಿ : 79751 39332/ 70199 80484

## ಕ್ರಿಪ್ಟೋ ಕರೆನ್ಸಿ ಆದಾಯಕ್ಕೆ ಶೇ.30ರ ತೆರಿಗೆ ಡಿಜಿಟಲ್ ಆಸ್ತಿಗಳ ವಹಿವಾಟಿಗೆ ಶೇ.1ರ ಟಿ.ಡಿ.ಎಸ್

ನವದೆಹಲಿ, ಫೆ. 1 - ಕ್ರಿಪ್ಟೋ ಕರೆನ್ಸಿಗಳು ಹಾಗೂ ವರ್ಚ್ಯುಯಲ್ ಆಸ್ತಿಗಳ ತೆರಿಗೆಯಲ್ಲಿ ಸ್ಪಷ್ಟತೆ ತಂದಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಈ ರೀತಿಯ ಆಸ್ತಿಗಳ ವಹಿವಾಟಿಗೆ ಶೇ.30ರ ತೆರಿಗೆ ವಿಧಿಸಲು ಪ್ರಸ್ತಾಪಿಸಿದ್ದಾರೆ. ಈ ರೀತಿಯ ಆಸ್ತಿಗಳನ್ನು ತೆರಿಗೆ ಜಾಲಕ್ಕೆ ತರಲಾಗುವುದು. ಇಂತಹ ಆಸ್ತಿಗಳ ವಹಿವಾಟಿಗೆ ಶೇ.1ರ ಟಿ.ಡಿ.ಎಸ್. ವಿಧಿಸಲಾಗುವುದು. ಕ್ರಿಪ್ಟೋ ಹಾಗೂ ಡಿಜಿಟಲ್ ಆಸ್ತಿಗಳ ಕೊಡುಗೆ ನೀಡಿದಾಗಲೂ ತೆರಿಗೆ ವಿಧಿಸಲಾಗುವುದು ಎಂದು ಸೀತಾರಾಮನ್ ಕೇಂದ್ರ ಬಜೆಟ್‌ನಲ್ಲಿ ತಿಳಿಸಿದ್ದಾರೆ. ತೆರಿಗೆ ಪ್ರಸ್ತಾಪಗಳು ಬಜೆಟ್ ಜಾರಿಯಾದ ನಂತರ ಏಪ್ರಿಲ್ 1ರಿಂದ ಅನ್ವಯವಾಗಲಿವೆ. ಲಾಟರಿ, ಆಟದ ಕಾರ್ಯಕ್ರಮಗಳು ಇತ್ಯಾದಿಗಳಲ್ಲಿ ಬಹುಮಾನ ಪಡೆದಾಗ ವಿಧಿಸುವ ತೆರಿಗೆಯ ಪ್ರಮಾಣವನ್ನೇ ಕ್ರಿಪ್ಟೋ ಕರೆನ್ಸಿಗಳಿಗೆ ಅನ್ವಯಿಸಲಾಗಿದೆ.

ಡಿಜಿಟಲ್ ಹಾಗೂ ಎನ್.ಎಫ್.ಟಿ. ರೀತಿಯ ಆಸ್ತಿಗಳು ಜಗತ್ತಿನಾದ್ಯಂತ ಮಾನ್ಯತೆ ಪಡೆಯುತ್ತಿವೆ. ಇವುಗಳ ವಹಿವಾಟು ಏರುಮುಖವಾಗಿದೆ. ಆದರೆ, ಭಾರತದಲ್ಲಿ ಇದುವರೆಗೂ ಇಂತಹ ಆಸ್ತಿಗಳ ನಿಯಂತ್ರಣಕ್ಕೆ ಸ್ಪಷ್ಟ ನೀತಿ ಇರಲಿಲ್ಲ.

## ಅಕ್ಟೋಬರ್‌ನಿಂದ ಡೀಸೆಲ್ ಬೆಲೆ 2 ರೂ. ಏರಿಕೆ

ನವದೆಹಲಿ, ಫೆ. 1 – ಎಥೆನಾಲ್ ಇಲ್ಲವೇ ಬಯೋಡೀಸೆಲ್ ಬೆರೆಸದ ಡೀಸೆಲ್ ಮೇಲೆ ಹೆಚ್ಚುವರಿ ಅಬಕಾರಿ ತೆರಿಗೆ ಹೇರುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ಇದರಿಂದಾಗಿ ಅಕ್ಟೋಬರ್ 1ರಿಂದ ದೇಶದ ಬಹುತೇಕ ಭಾಗಗಳಲ್ಲಿ ಡೀಸೆಲ್ ಬೆಲೆಯಲ್ಲಿ ಲೀಟರ್‌ಗೆ 2 ರೂ.ಗಳ ಏರಿಕೆ ಆಗಬಹುದಾಗಿದೆ.

ಪ್ರಸಕ್ತ ಪೆಟ್ರೋಲ್‌ನಲ್ಲಿ ಶೇ.10ರಷ್ಟು ಎಥೆನಾಲ್ ಬೆರೆಸಲಾಗುತ್ತಿದೆ. ದೇಶದ ಶೇ.80ರಷ್ಟು ಭಾಗಕ್ಕೆ ಎಥೆನಾಲ್ ಮಿಶ್ರಿತ ಪೆಟ್ರೋಲ್ ಪೂರೈಕೆಯಾಗುತ್ತಿದೆ.

ಮತ್ತೊಂದೆಡೆ ಡೀಸೆಲ್‌ನಲ್ಲಿ ಪ್ರಾಯೋಗಿಕವಾಗಿ ಬಯೋಡೀಸೆಲ್ ಬೆರೆಸಲಾಗುತ್ತಿದೆ. ಬಯೋಡೀಸೆಲ್ ಬಳಕೆಗೆ ಉತ್ತೇಜನ ನೀಡುವ ಸಲುವಾಗಿ ಡೀಸೆಲ್ ಮೇಲೆ ಹೆಚ್ಚುವರಿ ತೆರಿಗೆ ಹೇರಲಾಗುತ್ತಿದೆ. ಈಶಾನ್ಯ ಭಾಗದಲ್ಲಿ ಬಯೋಡೀಸೆಲ್ ಬೆರೆಸದ ಡೀಸೆಲ್ ಬೆಲೆ 1 ರೂ. ಹೆಚ್ಚಿಸಲಾಗುವುದು.

## ಕುಂದುವಾಡದಲ್ಲಿ ಇಂದು ಮಾಗಾನಹಳ್ಳಿ ಗುರುಸಿದ್ದಪ್ಪ ಸಮುದಾಯ ಭವನದ ಉದ್ಘಾಟನೆ

ಕುಂದುವಾಡದ ಶ್ರೀ ಗಡಿಚೌಡೇಶ್ವರಿ ದೇವಿಯ 17ನೇ ವಾರ್ಷಿಕೋ ತ್ಸವ ಮತ್ತು ಶ್ರೀ ಆಂಜನೇಯ ಸ್ವಾಮಿ ದೇವ ಸ್ಥಾನದ 13ನೇ ವಾರ್ಷಿಕೋತ್ಸವ ಸಮಾರಂಭವು ಇಂದಿನಿಂದ ಮೂರು ದಿನ ನಡೆಯಲಿದೆ.

ಇಂದು ಬೆಳಿಗ್ಗೆ 6.30 ಕ್ಕೆ ಪಂಚಾಮೃತ ಅಭಿಷೇಕ, ಬೆಳಿಗ್ಗೆ 8 ಗಂಟೆಯಿಂದ ಚಂಡಿಕಾ ಹೋಮ ಹಾಗೂ ಸಂಜೆ 5 ಗಂಟೆಗೆ ಶ್ರೀ ಗಡಿ ಚೌಡೇಶ್ವರಿ ದೇವಸ್ಥಾನದ ಆವರಣದಲ್ಲಿನ ನೂತನ ಶ್ರೀಮತಿ ಮತ್ತು ಶ್ರೀ ಮಾಗಾನಹಳ್ಳಿ ಗುರುಸಿದ್ದಪ್ಪ ಸಮುದಾಯ ಭವನದ ಉದ್ಘಾಟನೆ ಜರುಗಲಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು. ಶ್ರೀ ಗುರುವರ್ಯ ಪ್ರಭಾಕರ ಭುವಬೋದಲೆ ಮಹಾರಾಜ್ (ಪಂಡರಾಪುರ) ದಾನಿಗಳನ್ನು ಸನ್ಮಾನಿಸುವರು.

ನಾಳೆ ಗುರುವಾರ ಬೆಳಿಗ್ಗೆ 6.30 ಕ್ಕೆ ಪಂಚಾಮೃತ ಅಭಿಷೇಕ, ಶ್ರೀ ಭಾವಸಾರ ಕ್ಷತ್ರಿಯ ದೈವ ಮಂಡಳಿ (ರಿ.ನಂ. 7) ಮತ್ತು ಭಾವಸಾರ ದೈವ ಮಂಡಳಿ (ರಿ.ನಂ. 6) ಹಾಗೂ ನಾಮದೇವ ಗೊಂದಲಿ ಸಮಾಜ ಬಾಂಧವರಿಂದ ಸಂಜೆ 6 ಗಂಟೆಗೆ ಪೋತಿ ಸ್ಥಾಪನೆ, ಭಜನೆ ನಡೆಯುವುದು.

## ನ್ಯಾಯಾಧೀಶರ ಹುದ್ದೆಯಿಂದ ವಜಾಕ್ಕೆ ಒತ್ತಾಯ : ಧರಣಿ

ದಾವಣಗೆರೆ, ಫೆ.1- ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರಿಗೆ ಅವಮಾನ ಮಾಡಿರುವ ರಾಯಚೂರಿನ ಜಿಲ್ಲಾ ನ್ಯಾಯಾಧೀಶರಾದ ಮಲ್ಲಿಕಾರ್ಜುನಗೌಡ ಅವರನ್ನು ಹುದ್ದೆಯಿಂದ ವಜಾಗೊಳಿಸಿ, ಅವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿ, ನಾಳೆ ದಿನಾಂಕ 2 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸುವುದಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಡಾ. ಅಂಬೇಡ್ಕರ್ ವಾದ) ಜಿಲ್ಲಾ ಸಮಿತಿ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ರಾಜ್ಯ ಸಂಚಾಲಕ ಹೆಚ್. ಮಲ್ಲೇಶ್ ಅವರು, ಇಡೀ ರಾಜ್ಯಾದ್ಯಂತ ದಲಿತ ಸಂಘಟನೆಗಳೂ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳು ನ್ಯಾಯಾಧೀಶರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸುತ್ತಿದ್ದರೂ ಸರ್ಕಾರ ತಟಸ್ಥ ನೀತಿ ಅನುಸರಿಸುತ್ತಿರುವುದನ್ನು ಖಂಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳಾದ ಎಸ್. ವೆಂಕಟೇಶ ಬಾಬು, ಹೆಚ್. ಸಿ. ಮಲ್ಲಪ್ಪ, ಸೀತಮ್ಮ ಆವರಗೆರೆ, ಸಮಾದೆಪ್ಪ ಶಾಮನೂರು, ಚಂದ್ರಪ್ಪ ಉಪಸ್ಥಿತರಿದ್ದರು.

## ಮಧ್ಯಮ ವರ್ಗದ ವಿರೋಧಿ ಬಜೆಟ್

**(1ನೇ ಪುಟದಿಂದ)** ಬಜೆಟ್ ಎಂದು ಹೇಳಿ, ಅದರಡಿಯಲ್ಲಿ ವೇತನ ವರ್ಗದವರಿಗೆ ಏನೂ ಇಲ್ಲ. ಮಧ್ಯಮ ವರ್ಗ, ಬಡವರು ಮತ್ತು ಸೌಕರ್ಯ ವಂಚಿತರು, ಯುವಜನರು, ರೈತರು ಮತ್ತು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಏನೂ ಇಲ್ಲ ಎಂದು ವ್ಯಂಗ್ಯವಾಡಿದ್ದಾರೆ. 'ರೈತರ ಆದಾಯವನ್ನು ದ್ವಿಗುಣಗೊಳಿಸುವುದಿಲ್ಲ, ಮಧ್ಯಮ ವರ್ಗದವರಿಗೆ ತೆರಿಗೆ ವಿನಾಯಿತಿ ಇಲ್ಲ, ಹಣದುಬ್ಬರ ಬೆಲೆ ಇಳಿಕೆಯಿಲ್ಲ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಯಾವುದೇ ಕ್ರಮವೂ ಇಲ್ಲ, ಯುವಕರಿಗೆ ಉದ್ಯೋಗ ಅವಕಾಶ ನೀಡಲಾಗಿಲ್ಲ. ಈ ಬಾರಿಯೂ ಹಳೇ ಸುಳ್ಳುಗಳನ್ನೇ ಹೇಳಲಾಗಿದೆ ಮತ್ತು ಸಬ್ಸಿಡಿ ಮೇಲೆ ಪ್ರಹಾರ ನಡೆಸಲಾಗಿದೆ. ಇದು ಮೋದಿ ಸರ್ಕಾರದ ಈ ಬಾರಿಯ ಬಜೆಟ್ ಸಾರಾಂಶ ಎಂದು ವ್ಯಂಗ್ಯವಾಡಿದ್ದಾರೆ.

## ನಗರದಲ್ಲಿ ಇಂದು ಭಜನಾ ಸ್ಪರ್ಧೆ

ರಾಜ್ಯ ಮಟ್ಟದ ಕನ್ನಡ ಸಮೂಹ ಭಜನಾ ಸ್ಪರ್ಧೆ ಮತ್ತು ಪುರಾಣ ಪ್ರವಚನವು ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಉದ್ಘಾಟನೆಗೊಳ್ಳಲಿದೆ.

ಸಾನ್ನಿಧ್ಯ: ಶ್ರೀ ಕಲ್ಲಯ್ಯ ಅಜ್ಜ ಮತ್ತು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ. ಉದ್ಘಾಟನೆ : ಡಾ. ಶಾಮನೂರು ಶಿವಶಂಕರಪ್ಪ. ಅಧ್ಯಕ್ಷತೆ : ಅಥಣಿ ಎಸ್.ವೀರಣ್ಣ. ಅತಿಥಿಗಳು : ಮಹಾಂತೇಶ್ ಬೀಳಗಿ, ಸಿ.ಬಿ.ರಿಷ್ಯಂತ್, ಬಿ.ಸಿ.ಉಮಾಪತಿ.

## ಕೇಂದ್ರದಿಂದ 11.6 ಲಕ್ಷ ಕೋಟಿ ರೂ.ಗಳ ಸಾಲ

ನವದೆಹಲಿ, ಫೆ. 1 – ಕೊರೊನಾದಿಂದ ತತ್ತರಿಸಿರುವ ಆರ್ಥಿಕತೆಯ ಅಗತ್ಯಗಳಿಗಾಗಿ ಕೇಂದ್ರ ಸರ್ಕಾರ 11.6 ಲಕ್ಷ ಕೋಟಿ ರೂ.ಗಳ ಸಾಲ ಪಡೆಯಲಿದೆ. 2022-23ರ ಸಾಲಿಗಾಗಿ ಕೇಂದ್ರ ಸರ್ಕಾರ ಈ ಸಾಲ ಪಡೆಯಲಿದೆ. ಇದು ಪ್ರಸಕ್ತ ವರ್ಷದ ಅಂದಾಜು ಸಾಲ 9.7 ಲಕ್ಷ ಕೋಟಿ ರೂ.ಗಳಿಗಿಂತ ಸುಮಾರು 2 ಲಕ್ಷ ಕೋಟಿ ರೂ. ಹೆಚ್ಚಾಗಿದೆ. ಈ ಹಿಂದೆ ಪಡೆಯಲಾದ ಸಾಲಗಳನ್ನು ಮರು ಪಾವತಿ ಮಾಡುವ ಸಲುವಾಗಿಯೂ ಹೊಸ ಸಾಲ ಪಡೆಯಲಾಗುತ್ತಿದೆ. ವಿತ್ತೀಯ ಕೊರತೆ ನಿವಾರಣೆಗಾಗಿ ಸರ್ಕಾರ ಮಾರುಕಟ್ಟೆಯಿಂದ ಹಣ ಪಡೆಯುತ್ತಿದೆ.

## ಸಹಕಾರಿ ಸಂಸ್ಥೆಗಳ ತೆರಿಗೆ ಇಳಿಕೆ

**(1ನೇ ಪುಟದಿಂದ)** ಲಾಗುವುದು ಎಂದಿದ್ದಾರೆ.

1 ಕೋಟಿ ರೂ.ಗಳಿಂದ 10 ಕೋಟಿ ರೂ.ಗಳವರೆಗೆ ಆದಾಯ ಹೊಂದಿರುವ ಸಹಕಾರಿ ಸಂಸ್ಥೆಗಳಿಗೆ ವಿಧಿಸಲಾಗುವ ಸರ್‌ಚಾರ್ಜ್ ಅನ್ನು ಈಗಿರುವ ಶೇ.12ರಿಂದ ಶೇ.7ಕ್ಕೆ ಇಳಿಸಲಾಗುವುದು. ಸಹಕಾರಿಗಳು ಹಾಗೂ ಕಂಪನಿಗಳ ನಡುವೆ ಸಮಾನತೆ ತರಲು ತೆರಿಗೆ ಕಡಿತ ಮಾಡಲಾಗುವುದು ಎಂದು ಸೀತಾರಾಮನ್ ಹೇಳಿದ್ದಾರೆ.

## ವೈಮಾನಿಕ ಇಂಧನ ಬೆಲೆ ದಾಖಲೆ ಮಟ್ಟಕ್ಕೆ

ನವದೆಹಲಿ, ಫೆ. 1 - ವೈಮಾನಿಕ ಇಂಧನದ ಬೆಲೆಯನ್ನು ಶೇ.8.5ರಷ್ಟು ಹೆಚ್ಚಿಸಲಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ನಿರಂತರ ಏರಿಕೆಯಾಗುತ್ತಿರುವುದರಿಂದ, ವೈಮಾನಿಕ ಇಂಧನದ ಬೆಲೆ ದಾಖಲೆ ಮಟ್ಟಕ್ಕೆ ತಲುಪಿದೆ.

ವೈಮಾನಿಕ ಇಂಧ (ಎ.ಟಿ.ಎಫ್.) ಬೆಲೆಯನ್ನು ತಿಂಗಳಲ್ಲಿ ಮೂರು ಬಾರಿ ಹೆಚ್ಚಿಸಲಾಗಿದೆ. ಎ.ಟಿ.ಎಫ್. ಬೆಲೆ ಕಿಲೋ ಲೀಟರ್‌ಗೆ 6,743.25 ರೂ.ಗಳಷ್ಟು ಹೆಚ್ಚಿಸಿ 86,038.16 ರೂ.ಗಳಿಗೆ ನಿಗದಿ ಪಡಿಸಲಾಗಿದೆ.

ಎ.ಟಿ.ಎಫ್. ಬೆಲೆ ಅತಿ ಹೆಚ್ಚಿನ ಮಟ್ಟಕ್ಕೆ ತಲುಪಿದೆ. ಈ ಹಿಂದೆ ಆಗಸ್ಟ್ 2008ರಲ್ಲಿ ಎ.ಟಿ.ಎಫ್. ಬೆಲೆ 71,028.26 ರೂ.ಗಳಿಗೆ ತಲುಪಿತ್ತು. ಬೆಲೆ ಏರಿಕೆ ವಿಮಾನಯಾನ ಸಂಸ್ಥೆಗಳ ಮೇಲೆ ಮತ್ತಷ್ಟು ಒತ್ತಡ ತರಲಿದೆ.

## ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶ್ಯಾಗಲೆ, ಕಂದಗಲ್ಲು, ಕೋಡಿಹಳ್ಳಿ, ಗೋಣಿವಾಡ ಹಾಗೂ ಸುತ್ತಮುತ್ತಲಿನ ಗ್ರಾಮಗಳು. ದೊಡ್ಡ ಮಲ್ಲಾಪುರ, ಸಿದ್ಧನಮಠ, ಕಾಕನೂರು, ಸಂತೇಬೆನ್ನೂರು, ಬೆಳ್ಳಿಗನೂಡು, ನಿಂಬಾಪುರ, ಅರಳಿಕಟ್ಟೆ, ತಣಿಗೆರೆ, ಚಿಕ್ಕಬೆನ್ನೂರು, ಹಿರೇಕೋಗಲೂರು, ದೊಡ್ಡಬ್ಬಿಗೆರೆ, ಅಬ್ಬಿಗೆರೆ ಸುತ್ತಮುತ್ತಲಿನ ಗ್ರಾಮಗಳು. ಕೆರೆಬಿಳಚಿ, ಹೊಸೂರು, ಚನ್ನಾಪುರ, ಆಲೂರು, ಸೋಮಲಾಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳು. ಬಸವಾಪಟ್ಟಣ, ಹರ್ಲಿಪುರ, ಹೊಸಹಳ್ಳಿ, ಮರಬನಹಳ್ಳಿ, ಚಿರಡೋನಿ, ಯಲೋದಹಳ್ಳಿ, ಪುಣ್ಯಸ್ಥಳ, ಸಂಗಾಹಳ್ಳಿ, ಸಿದ್ದೇಶ್ವರ ನಗರ, ನಿಲೋಗಲ್, ಕಂಚುಗಾರನಹಳ್ಳಿ, ದಾಗಿನಕಟ್ಟೆ ಹಾಗೂ ಸುತ್ತಮುತ್ತಲಿನ ಗ್ರಾಮಗಳು, ತ್ಯಾವಣಿಗಿ, ನಲ್ಕುದುರೆ, ದೊಡ್ಡಗಟ್ಟ, ಕತ್ತಲಗೆರೆ, ಕಾರಿಗನೂರು, ಬೆಳಲಗೆರೆ, ಹರೆಹಳ್ಳಿ, ನವಿಲೇಹಾಳು, ಕಬ್ಬಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


Srishyla Educational Trust (R)

**GM INSTITUTE OF PHARMACEUTICAL SCIENCES AND RESEARCH**

GMIT Campus, PB Raod, Davangere - 570006.

**Ph: 08192-233377(O), Fax: 08192-233244**

**WANTED**

**LABORATORY TECHNICIAN**
Qualification : D. Pharm (Diploma in Pharmacy)/BSc

**LABORATORY ATTENDER**
Qualification : PUC (Science)/ SSLC

**OFFICE ASSISTANT**
Qualification : BSc/ B.Com with computer knowledge (Preference will be given to candidate with knowledge of DTP and graphic design work)

Applications are invited from eligible candidates along with C.V. Applications should reach the principal, GM Institute of Pharmaceutical Sciences and Research, Davangere-06.

Dr. Girish Bolakatti
Principal

Sri Y.U. Subashchandra
Management Representative

# ವಚನಗಳಿಂದ ಸಮಾಜ ತಿದ್ದಿದ ಮಾಚಿದೇವರು



ರಾಣೇಬೆನ್ನೂರು, ಫೆ.1- ಕಾಯಕ ಯೋಗಿ ಮಡಿವಾಳ ಮಾಚಿದೇವರ ಕೊಡುಗೆ ಮಡಿವಾಳ ಸಮಾಜಕ್ಕೆ ಅಪಾರವಾಗಿದ್ದು, ವಚನಗಳ ಮೂಲಕ ಸಮಾಜವನ್ನು ತಿದ್ದುವ ಕೆಲಸವನ್ನು ಮಾಡಿ ಮಾಚಿದೇವರು ಅಮರರಾಗಿದ್ದಾರೆ. ಕಾಯಕಕ್ಕೆ ಇನ್ನೊಂದು ಹೆಸರೇ ಮಾಚಿದೇವರಾಗಿದ್ದರು. ಅಂತಹ ಶರಣರ ಆದರ್ಶಗಳನ್ನು ಸರ್ವರೂ ಜೀವನದಲ್ಲಿ ರೂಢಿಸಿಕೊಂಡು ಮುನ್ನಡೆಯಬೇಕು ಎಂದು ಯುವ ನ್ಯಾಯವಾದಿ ಕುಮಾರ್ ಮಡಿವಾಳರ ಹೇಳಿದರು.

ಮಂಗಳವಾರ ನಗರದ ಮಿನಿ ವಿಧಾನಸೌಧದ ಸಭಾಂಗಣದಲ್ಲಿ ವಿವಿಧ ಮಡಿವಾಳ ಸಂಘಗಳ ನೇತೃತ್ವದಲ್ಲಿ ಏರ್ಪಾಡಾಗಿದ್ದ ಕಾಯಕ ಯೋಗಿ ಶ್ರೀ ಮಡಿವಾಳ ಮಾಚಿದೇವರ ಜಯಂತ್ಯುತ್ಸವದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಭಕ್ತಿಯಿಂದ ಸಾಮಾಜಿಕ ಸುವ್ಯವಸ್ಥೆ, ಧಾರ್ಮಿಕ, ಶರಣ ಸಂಸ್ಕೃತಿಯ ಮೂಲಕ ಮರೆಯಲಾರದಂತಹ ಕೊಡುಗೆ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರ್ ಜಿ.ಎಸ್. ಶಂಕರ್ ಮಾತನಾಡಿ, ಮಡಿವಾಳ ಸಮಾಜದವರು ಕೇವಲ ಬಟ್ಟೆಗಳನ್ನು ಮಡಿ ಮಾಡಿ ಶುದ್ಧಿಗೊಳಿಸುವುದಷ್ಟೇ ಅಲ್ಲ, ಮನಸುಗಳನ್ನೂ ಮಡಿ ಮಾಡಿ ಶುದ್ಧ ಮಾಡುವ ಪ್ರಾಮಾಣಿಕ ಕಾಯಕ ಈ ಜನಾಂಗ ಮಾಡುತ್ತಿದೆ. ಜನಾಂಗದವರು ಎಲ್ಲ ಹಂತಗಳಲ್ಲೂ ಮುಂದೆ ಬರಬೇಕಾದರೆ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕರೆ ನೀಡಿದರು.

ಸಮಾಜದ ಮುಖಂಡರುಗಳಾದ ಚಂದ್ರಣ್ಣ ಚಳಗೇರಿ, ವೀರಣ್ಣ ದೊಡ್ಡಮನಿ, ಡಿಳ್ಳೆಪ್ಪ ಮಡಿವಾಳರ, ಹನುಮಂತಪ್ಪ ಮಡಿವಾಳರ, ಅಶೋಕ ಮಡಿವಾಳರ, ರಾಜು ಮಡಿವಾಳರ, ಹಾದಿಮನಿ, ಎಂ.ಚಿರಂಜೀವಿ, ಮಾಲತೇಶ ಮಡಿವಾಳರ, ಗುಡ್ಡಪ್ಪ ಮಡಿವಾಳರ, ಮಧು ಮಡಿವಾಳರ, ಅನಿಲ್ ಮಡಿವಾಳರ, ಮಾಲತೇಶ ನೆಸ್ವಿ, ನಾಗಪ್ಪ ಮಡಿವಾಳರ, ಮಹೇಶ ಮಡಿವಾಳರ ಸೇರಿದಂತೆ ಸಮಾಜ ಬಾಂಧವರು ಕಛೇರಿಯ ಸಿಬ್ಬಂದಿಗಳು ಮತ್ತಿತರರು ಇದ್ದರು.

> “ ದೇಶದ 18 ರಾಜ್ಯಗಳಲ್ಲಿ ಈ ಮಡಿವಾಳ ಸಮಾಜವು ಪ.ಜಾತಿಗೆ ಸೇರ್ಪಡೆಗೊಂಡಿದ್ದು, ಕರ್ನಾಟಕದಲ್ಲೂ ಪ.ಜಾ.ಗಾಗಿ ಮೀಸಲಿಗೆ ರಾಜ್ಯ ಸರ್ಕಾರವು ಕೇಂದ್ರಕ್ಕೆ ಶೀಘ್ರುವೇ ಶಿಫಾರಸ್ಸು ಮಾಡಬೇಕು.
>
> -ಕುಮಾರ್ ಮಡಿವಾಳರ
> ನ್ಯಾಯವಾದಿ, ರಾಣೇಬೆನ್ನೂರು

# ಮಾಚಿದೇವರ ಆದರ್ಶ ಎಲ್ಲರಿಗೂ ಅನ್ವಯ



ಜಗಳೂರು, ಫೆ.1- ಕಾಯಕದ ಮೂಲಕ ಬದುಕು ಕಟ್ಟಿಕೊಂಡು ಸಾಮಾಜಿಕ ಕ್ರಾಂತಿಗೆ ಕಾರಣರಾದ ಮಡಿವಾಳ ಮಾಚಿದೇವ ಅವರ ಆದರ್ಶಗಳು ಎಲ್ಲಾ ಸಮಾಜಗಳಿಗೂ ಅನ್ವಯವಾಗುತ್ತವೆ ಎಂದು ತಹಶೀಲ್ದಾರ್ ಸಂತೋಷ್ ಕುಮಾರ್ ಹೇಳಿದರು.

ಪಟ್ಟಣದ ಮಿನಿ ವಿಧಾನಸೌಧದಲ್ಲಿ ತಾಲ್ಲೂಕು ಆಡಳಿತ ಹಾಗೂ ಮಡಿವಾಳ ಸಮಾಜದ ಸಹಯೋಗದಲ್ಲಿ ಇಂದು ಏರ್ಪಾಡಾಗಿದ್ದ ಮಡಿವಾಳ ಮಾಚಿದೇವ ಜಯಂತ್ಯೋತ್ಸವದ ಸರಳ ಆಚರಣೆಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು.

ಸಮ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಿದಂತಹ ವಚನಕಾರರಲ್ಲೊಬ್ಬರಾದ ಮಾಚಿದೇವರ ಆದರ್ಶಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.

ಸಮಾಜದ ಪ್ರಧಾನ ಕಾರ್ಯದರ್ಶಿ ಹರೀಶ್ ಮಾತನಾಡಿ, ಕಾಯಕ ನಿಷ್ಠೆಗೆ ಹೆಸರಾದ ಮಡಿವಾಳ ಮಾಚಿದೇವ ಶರಣರು ಸಮಾಜದ ಕಳಶದಂತೆ ಇದ್ದು ಕೇವಲ ಬಟ್ಟೆಯ ಕೊಳೆಯನ್ನ ಲ್ಲದೇ ಅಸಮಾನತೆಯ ಮನಸ್ಸುಗಳ ಕೊಳೆಯನ್ನು ವಚನಗಳ ಮೂಲಕ ತೊಳೆದು ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡಲು ಬಸವಾದಿ ಶರಣರೊಂದಿಗೆ ಹೆಜ್ಜೆ ಹಾಕಿದರು ಎಂದರು. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವ ಮಡಿವಾಳ ಸಮಾಜವನ್ನು ಅನ್ನಪೂರ್ಣ ವರದಿ ಪ್ರಕಾರ ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಬೇಕು ಎಂದು ಇದೇ ವೇಳೆ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಎಇಇ ರುದ್ರಪ್ಪ, ಉಪ ತಹಶೀಲ್ದಾರ್ ರಾಮಚಂದ್ರಪ್ಪ, ರಾಜಸ್ವ ನಿರೀಕ್ಷಕ ಕುಬೇರನಾಯ್ಕ, ಮಡಿವಾಳ ಸಮಾಜದ ಅಧ್ಯಕ್ಷ ರೇವಣಸಿದ್ದಪ್ಪ, ಖಜಾಂಚಿ ಹರೀಶ್, ತಿಪ್ಪೇಸ್ವಾಮಿ, ರವಿಕುಮಾರ್, ಚಂದ್ರಪ್ಪ, ಸಂಜಯ್ ಸೇರಿದಂತೆ ಮಡಿವಾಳ ಸಮಾಜದ ಹಲವು ಮುಖಂಡರು ಕಚೇರಿ ಸಿಬ್ಬಂದಿಗಳು ಇದ್ದರು.

> “ ಕಲ್ಯಾಣ ರಾಜ್ಯದಲ್ಲಿ ಜಗಜ್ಯೋತಿ ಬಸವೇಶ್ವರ ಅವರ ಒಡನಾಡಿಗಳಾಗಿದ್ದ ಮಾಚಿದೇವರು ಕಾಯಕ ನಿಷ್ಠೆಯೊಂದಿಗೆ ವಚನಗಳನ್ನು ನುಡಿಯುತ್ತಾ ಸಮಾಜದ ಕಂದಾಚಾರದ ವಿರುದ್ಧ ಸಮರ ಸಾರಿದ್ದರು.
>
> - ಸಂತೋಷ್ ಕುಮಾರ್,
> ತಹಶೀಲ್ದಾರ್, ಜಗಳೂರು.

## ನಾಮದೇವ ಸಿಂಪಿ ಸಮಾಜದ ವಿಠ್ಠಲ ರುಕ್ಮಿಣಿ ಮಂದಿರದಲ್ಲಿ ಪೂಜೆ



ದಾವಣಗೆರೆ ನಾಮದೇವ ಸಿಂಪಿ ಸಮಾಜದಿಂದ ಎಸ್.ಕೆ.ಪಿ. ರಸ್ತೆಯ ಶ್ರೀ ವಿಠ್ಠಲ ರುಕ್ಮಿಣಿ ಹರಿ ಮಂದಿರದಲ್ಲಿ ಇಂದಿನಿಂದ ಒಂದು ತಿಂಗಳವರೆಗೆ ಮಾಘ ಮಾಸದ ಪೂಜಾ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಇಂದು ಬೆಳಿಗ್ಗೆ 6.30 ರಿಂದ ಸತತ ತಿಂಗಳ ಕಾಲ ಶಿವರಾತ್ರಿವರೆಗೂ ನಡೆಯುವ ಪೂಜಾ ಕಾರ್ಯದಲ್ಲಿ ಶ್ರೀ ಪಾಂಡುರಂಗ ವಿಠ್ಠಲ ರುಕುಮಾಯಿಗೆ ಅಭಿಷೇಕ, ಕಾಕಡಾರತಿ ಮತ್ತು ಹರಿಭಕ್ತ ಪಾರಾಯಣ ಸೇರಿದಂತೆ ವಿಶೇಷ ಪೂಜೆಗಳು ಜರುಗಲಿವೆ ಎಂದು ಸಮಾಜದ ಪ್ರಧಾನ ಕಾರ್ಯದರ್ಶಿ ಮನೋಹರ್ ವಿ. ಬೊಂಗಾಳೆ ತಿಳಿಸಿದ್ದಾರೆ.

## ಬಾಳೆಹೊನ್ನೂರಿನಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳ ಪೀಠಾರೋಹಣ



ಬಾಳೆಹೊನ್ನೂರು, ಫೆ.1 - ರಂಭಾಪುರಿ ಪೀಠದ ಜಗದ್ಗುರು ಶ್ರೀ ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ಮಹಾಸ್ವಾಮೀಜಿ ಗಳವರ 31ನೇ ವರ್ಷದ ಪೀಠಾರೋಹಣ ಮಹೋತ್ಸವ ನಾಡಿದ್ದು ದಿನಾಂಕ 3ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಜರುಗಲಿದೆ. ಇಲ್ಲಿನ ಮಹಾಸಂಸ್ಥಾನ ಪೀಠದಲ್ಲಿ ಸರಳ ಹಾಗೂ ಸಾಂಪ್ರದಾಯಿಕವಾಗಿ ಜರುಗುವ ಈ ವರ್ಧಂತಿ ಮಹೋತ್ಸವದಲ್ಲಿ ಶ್ರೀ ಜಗದ್ಗುರುಗಳು ಪೀಠಾರೋಹಣ ಮಾಡಲಿದ್ದಾರೆ.

## ಆವರಗೆರೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಹೆಚ್.ಕರಿಯಪ್ಪ



ದಾವಣಗೆರೆ,ಫೆ.1- ಆವರಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಹೆಚ್. ಕರಿಯಪ್ಪ ಅವಿರೋಧವಾಗಿ ಆಯ್ಕೆಯಾಗಿ ದ್ದಾರೆ. ಮೊನ್ನೆ ನಡೆದ ಚುನಾವಣೆಯಲ್ಲಿ ಈ ಆಯ್ಕೆ ನಡೆಯಿತು. ಸಹಕಾರ ಸಂಘ ಗಳ ಉಪನಿಬಂಧಕರ ಕಛೇರಿ ಅಧೀಕ್ಷಕ ಆರ್. ರಮೇಶ್ ಚುನಾವ ಣಾಧಿಕಾರಿಯಾಗಿದ್ದರು.

## ಷೇರುಪೇಟೆಯಲ್ಲಿ 848 ಅಂಕಗಳ ಜಿಗಿತ

ನವದೆಹಲಿ, ಫೆ. 1 - ಬಜೆಟ್ ಮಂಡನೆ ದಿನದಂದು ಮುಂಬೈ ಷೇರು ಮಾರುಕಟ್ಟೆಯಲ್ಲಿ ಉತ್ಸಾಹ ಕಂಡುಬಂದಿದ್ದು, 848 ಅಂಕಗಳ ಏರಿಕೆಯಾಗಿದೆ.

ಮುಂಬೈ ಷೇರು ಸೂಚ್ಯಂಕ 58,862.57ರಲ್ಲಿ ಅಂತ್ಯವಾಗಿದೆ. ಇದು ಶೇ.1.46ರ ಹೆಚ್ಚಳವಾಗಿದೆ. ಎನ್.ಎಸ್.ಇ. 237 ಅಂಕಗಳ ಏರಿಕೆ ಕಂಡು 17,576.85ರಲ್ಲಿ ಅಂತ್ಯವಾಗಿದೆ.

ಟಾಟಾ ಸ್ಟೀಲ್ ಅತಿ ಹೆಚ್ಚಿನ ಶೇ.7.57ರ ಏರಿಕೆ ಕಂಡಿದೆ. ಸನ್ ಫಾರ್ಮ, ಇಂಡಸ್‌ಇಂಡ್ ಬ್ಯಾಂಕ್, ಎಲ್‌ಅಂಡ್‌ಟಿ, ಅಲ್ಟ್ರಾ ಸಿಮೆಂಟ್, ಐ.ಟಿ.ಸಿ. ಹಾಗೂ ಹೆಚ್‌ಸಿಎಲ್ ಟೆಕ್‌ಗಳು ಏರಿಕೆಯಾಗಿವೆ.

## ಕೃಷಿ ಪೂರಕ, ಆಹಾರ ಸಂಸ್ಕರಣೆ ವಲಯಗಳಿಗೆ ಒತ್ತು

ರೈತರ ಆದಾಯ ಹೆಚ್ಚಿಸುವ ಸಲುವಾಗಿ ಕೃಷಿಗೆ ಪೂರಕವಾಗಿರುವ ವಲಯಗಳು ಹಾಗೂ ಆಹಾರ ಸಂಸ್ಕರಣಾ ವಲಯಗಳಿಗೆ ಹೆಚ್ಚು ಒತ್ತು ನೀಡಲಾಗುವುದು. ನವೋದ್ಯಮ, ರೈತರ ಡ್ರೋನ್ ಹಾಗೂ ಕೃಷಿಗೆ ಸಂಬಂಧಿಸಿದ ಉನ್ನತ ತಂತ್ರಜ್ಞಾನದ ವಲಯಗಳ ಕಡೆ ಹೆಚ್ಚು ಗಮನ ಹರಿಸಲಾಗುವುದು.

# 60ರ ಸಂಭ್ರಮದಲ್ಲಿ ದಾವಣಗೆರೆ ಅರ್ಬನ್ ಬ್ಯಾಂಕ್




ದಾವಣಗೆರೆ, ಫೆ. 1- ದಾವಣಗೆರೆ ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಬ್ಯಾಂಕ್‌ಗಳಲ್ಲೊಂದಾದ ನಗರದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ತನ್ನ ಸ್ಥಾಪನೆಯ 60ನೇ ವರ್ಷಾಚರಣೆಯಲ್ಲಿ ಸಂಭ್ರಮಿಸುತ್ತಿದೆ.

ಈ ಸಂಬಂಧ ಬ್ಯಾಂಕ್ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ ಸರಳ ಸಮಾರಂಭದಲ್ಲಿ ಹಿರಿಯ ಕೈಗಾರಿಕೋದ್ಯಮಿಯೂ ಆಗಿರುವ ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಅವರು, ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರ ಚಪ್ಪಾಳೆಗಳ ಮಧ್ಯೆ ಜ್ಯೋತಿಯನ್ನು ಪ್ರಜ್ವಲಿಸುವುದರೊಂದಿಗೆ ಕೇಕ್ ಕತ್ತರಿಸಿದರು.

ನಂತರ ಆಶಯ ನುಡಿಗಳನ್ನಾಡಿದ ಬಕ್ಕೇಶಪ್ಪ, ಮಧ್ಯ ಕರ್ನಾಟಕದಲ್ಲಿ ಸ್ಥಾಪನೆಗೊಂಡ ಪ್ರಪ್ರಥಮ ಸಹಕಾರಿ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ತನ್ನದೇ ಆದ ವಿಶಿಷ್ಟತೆಯನ್ನು ಇಟ್ಟುಕೊಳ್ಳುವುದರ ಮೂಲಕ ಮಾದರಿ ಬ್ಯಾಂಕ್ ಎಂಬ ಕೀರ್ತಿಗೆ ಪಾತ್ರವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಜಿಲ್ಲೆಯ ಸಹಕಾರಿ ಬ್ಯಾಂಕ್ ಗಳಲ್ಲೇ ಅತೀ ಹೆಚ್ಚು - ಹೆಚ್ಚು ಲಾಭವನ್ನು ಗಳಿಸುವುದರ ಜೊತೆ-ಜೊತೆಗೆ ಬ್ಯಾಂಕಿಗೆ ಬೆನ್ನೆಲುಬಾಗಿರುವ ಸಾಲ ಪಡೆದ ಗ್ರಾಹಕರು, ಷೇರುದಾರರು, ಠೇವಣಿದಾರರು, ಸಿಬ್ಬಂದಿ ವರ್ಗದವರ ಹಿತವನ್ನು ಕಾಯ್ದುಕೊಂಡು ಮುನ್ನಡೆದಿರುವ ಬ್ಯಾಂಕ್ ಇದಾಗಿದೆ ಎಂದು ಬಕ್ಕೇಶಪ್ಪ ತಿಳಿಸಿದರು.

ಉಪಾಧ್ಯಕ್ಷ ಅಂದನೂರು ಮುಪ್ಪಣ್ಣ ಮಾತನಾಡಿ, ಈ ಬ್ಯಾಂಕಿನ ಪ್ರಗತಿಗೆ ಕಾರಣರಾದ ಷೇರುದಾರರು, ಠೇವಣಿದಾರರು ಮತ್ತು ಗ್ರಾಹಕರ ಸಹಕಾರವನ್ನು ಸ್ಮರಿಸಿ, ಕೃತಜ್ಞತೆ ಸಲ್ಲಿಸಿದರು.

ಜವಳಿ ಉದ್ಯಮಿಯೂ ಆದ ಹಿರಿಯ ನಿರ್ದೇಶಕ ಬಿ.ಸಿ. ಉಮಾಪತಿ ಮಾತನಾಡಿ, ಈ ಬ್ಯಾಂಕ್ ಹುಟ್ಟುಹಾಕಿದ ಸಂಸ್ಥಾಪಕರ ಧ್ಯೇಯಗಳನ್ನು ಪ್ರಾಮಾಣಿಕವಾಗಿ ಈಡೇರಿಸುವಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು ಶ್ರಮಿಸುತ್ತಿರುವ ಹಿನ್ನೆಲೆಯಲ್ಲಿಯೇ ಇದೀಗ 60ನೇ ವರ್ಷಾಚರಣೆಯಲ್ಲಿ ಮುನ್ನಡೆದಿದೆ ಎಂದು ಹೇಳಿದರು.

ಮತ್ತೋರ್ವ ಹಿರಿಯ ನಿರ್ದೇಶಕರೂ ಆದ ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್ ಮಾತನಾಡಿ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಾಡಿನಲ್ಲೇ ಹೆಸರು ಮಾಡಿರುವ ಕೆಲವೇ ಸಹಕಾರಿ ಬ್ಯಾಂಕುಗಳಲ್ಲಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಕೂಡಾ ಒಂದಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇನ್ನೋರ್ವ ಹಿರಿಯ ನಿರ್ದೇಶಕರೂ ಆದ ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷ ಟಿ.ಎಸ್. ಜಯರುದ್ರೇಶ್ ಮಾತನಾಡಿ, ಅನೇಕ ಅಡೆ-ತಡೆಗಳ ನಡುವೆಯೂ ಈ ಬ್ಯಾಂಕ್ ವಿಶಿಷ್ಟ ಸೇವೆಯಿಂದಾಗಿ ತನ್ನ ಪ್ರತಿಷ್ಠೆ ಮತ್ತು ಮಾದರಿಯನ್ನು ಹೆಚ್ಚಿಸಿಕೊಳ್ಳುತ್ತಿದೆ ಎಂದು ಶ್ಲಾಘಿಸಿದರು.

ನಿರ್ದೇಶಕರುಗಳಾದ ಮತ್ತಿಹಳ್ಳಿ ವೀರಣ್ಣ, ಪಲ್ಲಾಗಟ್ಟೆ ಶಿವಾನಂದಪ್ಪ, ಎಂ. ಚಂದ್ರಶೇಖರ್, ಅಜ್ಜಂಪುರ ಶೆಟ್ರು ವಿಜಯಕುಮಾರ್, ಕಂಚಿಕೆರೆ ಮಹೇಶ್, ಶ್ರೀಮತಿ ಸುರೇಖಾ ಎಂ. ಚಿಗಟೇರಿ, ಶ್ರೀಮತಿ ಅರ್ಚನಾ ಡಾ. ರುದ್ರಮುನಿ, ಪ್ರಧಾನ ವ್ಯವಸ್ಥಾಪಕ ಡಿ.ವಿ. ಆರಾಧ್ಯಮಠ ಅವರುಗಳು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಡಿ.ಇ. ಸಿಂಧು ಅವರ ಪ್ರಾರ್ಥನೆ ನಂತರ ನಿರ್ದೇಶಕ ನಲ್ಲೂರು ರಾಘವೇಂದ್ರ ಸ್ವಾಗತಿಸಿದರು. ನಿರ್ದೇಶಕ ವಿ. ವಿಕ್ರಮ್ ವಂದಿಸಿದರು. ನಿರ್ದೇಶಕ ಇ.ಎಂ. ಮಂಜುನಾಥ ಕಾರ್ಯಕ್ರಮ ನಿರೂಪಿಸಿದರು.

## ರಾಣೇಬೆನ್ನೂರಿಗೆ ಇಂದು ಸಚಿವ ಸೋಮಣ್ಣ

ರಾಣೇಬೆನ್ನೂರಿನ ಆಂಜನೇಯ ಬಡಾವಣೆಯಲ್ಲಿ ಇಂದು ಏರ್ಪಾಡಾಗಿರುವ ಪ್ರಧಾನಮಂತ್ರಿ ಆವಾಸ್ ಯೋಜನೆಯ 1500 ಮನೆಗಳ ನಿರ್ಮಾಣ ಹಾಗೂ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆಯನ್ನು ವಸತಿ ಸಚಿವ ವಿ. ಸೋಮಣ್ಣ ಅವರು ನೆರವೇರಿಸುವರು. ಶಾಸಕ ಅರುಣಕುಮಾರ ಪೂಜಾರ ಜೊತೆಗಿರುವರು.

## ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಅಗ್ನಿ ಪ್ರವೇಶ -ವಿಶ್ವರೂಪ ದರ್ಶನ



ದಾವಣಗೆರೆ, ಫೆ.1- ನಗರದ ಎಸ್.ಕೆ.ಪಿ. ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ಅಗ್ನಿ ಪ್ರವೇಶ ಮತ್ತು ವಿಶ್ವರೂಪ ದರ್ಶನ ಕಾರ್ಯಕ್ರಮವು ನಾಡಿದ್ದು ದಿನಾಂಕ 3ರ ಗುರುವಾರ ನಡೆಯಲಿದೆ ಎಂದು ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್ ತಿಳಿಸಿದ್ದಾರೆ.

ಗುರುವಾರ ಬೆಳಿಗ್ಗೆ 10 ಗಂಟೆಯಿಂದ ವಾಸವಿ ಹೋಮ, 102 ಗೋತ್ರದ ಋಷಿ ಪ್ರವರ ಹೋಮ, ಸಂಜೆ 7 ಗಂಟೆಗೆ ಸಹಸ್ರ ಮಾನ ವರ್ಷದ ಅಂಗವಾಗಿ ಕುಲದೇವತೆ ಶ್ರೀ ವಾಸವಾಂಬೆಯ ಜೊತೆಯಲ್ಲಿ ನಮ್ಮದೇ ಗೋತ್ರದ - ನಮ್ಮದೇ ಪೂರ್ವಜ ದಂಪತಿಗಳು ಅಗ್ನಿ ಪ್ರವೇಶದ ಮೂಲಕ ಬಲಿದಾನಗೈದ ಪ್ರತಿ ದಂಪತಿಗಳ ಹೆಸರಿನಲ್ಲಿ ದೀಪ ಬೆಳಗಿಸುವುದರ ಮೂಲಕ ಅವರ ತ್ಯಾಗವನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸುವ ಕಾರ್ಯಕ್ರಮವೂ ಜರುಗಲಿದೆ.

ಸಮಾಜ ಬಾಂಧವರು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಸಂಘದ ಕಾರ್ಯದರ್ಶಿ ಜೆ. ರವೀಂದ್ರ ಗುಪ್ತ ಕೋರಿದ್ದಾರೆ.

## ಬನಶಂಕರಿ ದೇವಿಗೆ 508 ನಿಂಬೆಹಣ್ಣಿನ ಬೃಹತ್ ಹೂವಿನಾಲಂಕಾರ



ದಾವಣಗೆರೆ,ಫೆ.1 - ಬನದ ಹುಣ್ಣಿಮೆ ಪ್ರಯುಕ್ತ ಇಲ್ಲಿನ ಡಿಸಿಎಂ ಟೌನ್ ಶಿಪ್ ಹಿಂಭಾಗದ ರಾಜೇಂದ್ರ ಬಡಾವಣೆಯಲ್ಲಿನ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಅಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜೆ ನಡೆಯಿತು.

ಭಕ್ತರೋರ್ವರು ಸಮರ್ಪಿಸಿದ 508 ನಿಂಬೆಹಣ್ಣಿನ ಬೃಹತ್ ಹೂವಿನಾಲಂಕಾರದಲ್ಲಿ ಕಂಗೊಳಿಸುವ ಬನಶಂಕರಿ ದೇವಿ. ಗಾಯತ್ರಿ ಹಾಗೂ ಲಕ್ಷ್ಮಿ ದೇವಿಗೂ ವಿಶೇಷವಾಗಿ ಅಲಂಕರಿಸಲಾಗಿತ್ತು.


## ಹುಟ್ಟುಹಬ್ಬದ ಶುಭಾಶಯಗಳು



ಹುಟ್ಟುಹಬ್ಬದ ಸಂಭ್ರಮದಲ್ಲಿರುವ ದಾವಣಗೆರೆ ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾದ

**ಶ್ರೀ ಶ್ರೀನಿವಾಸ್ ದಾಸಕರಿಯಪ್ಪ** ಅವರನ್ನು

ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದೇವರಮನೆ ಶಿವಕುಮಾರ್ ಅವರು ಪುಷ್ಪಮಾಲೆಯೊಂದಿಗೆ ಸನ್ಮಾನಿಸಿ, ಗೌರವಿಸಿದರು. ಬಿಜೆಪಿ ಮುಖಂಡರೂ, ವಕೀಲರೂ ಆಗಿರುವ ಹೆಚ್. ದಿವಾಕರ್, ಎ.ಸಿ. ರಾಘವೇಂದ್ರ, ಬಿಜೆಪಿ ಮುಖಂಡರುಗಳಾದ ಪಿ.ಸಿ. ಶ್ರೀನಿವಾಸ್, ಶಿವನಗೌಡ ಪಾಟೀಲ್, ಟಿಂಕರ್ ಮಂಜಣ್ಣ, ಜೆ.ಎಸ್. ಗಂಗಾಧರ್ ಮತ್ತು ಇತರರು ಈ ಸಂದರ್ಭದಲ್ಲಿ ಹಾಜರಿದ್ದು, ಶ್ರೀನಿವಾಸ್ ದಾಸಕರಿಯಪ್ಪ ಅವರಿಗೆ ಶುಭಾಶಯ ಕೋರಿದರು.

## ಹೃದಯಪೂರ್ವಕ ಅಭಿನಂದನೆಗಳು



ಹರಿಹರ ತಾಲ್ಲೂಕು ಜರೇಕಟ್ಟೆ ಗ್ರಾಮದವರಾದ ದಾವಣಗೆರೆಯ ಉದಯೋನ್ಮುಖ ಪ್ರತಿಭೆ ಪಿ.ಬಿ. ಸಾಗರ್ ಜಾಧವ್ ಅವರ ಅನನ್ಯ ಸಮಾಜ ಸೇವೆಗೆ ಗ್ಲೋಬಲ್ ಅಚೀವರ್ಸ್ ಕೌನ್ಸಿಲ್ (ಚೆನ್ನೈ) ಗೌರವ ಡಾಕ್ಟರೇಟ್ ನೀಡಿದೆ. ಚೆನ್ನೈ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ

**ಪಿ.ಬಿ. ಸಾಗರ್ ಜಾಧವ್**

ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಯಿತು.

ಗೌರವ ಡಾಕ್ಟರೇಟ್ ಪದವಿಗೆ ಭಾಜನರಾಗಿರುವ **ಶ್ರೀಯುತ ಸಾಗರ್** ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.



**ಡಾ|| ಪಿ. ಮಹಾರುದ್ರಚಾರ್**
ಅಖಿಲ ಭಾರತ ವಿಶ್ವಕರ್ಮ ಪರಿಷತ್ ಪ್ರಧಾನ ಕಾರ್ಯದರ್ಶಿ, ನವದೆಹಲಿ., ದಾವಣಗೆರೆ ಜಿಲ್ಲಾ ವಿಶ್ವಕರ್ಮ ಅಭಿವೃದ್ಧಿ ನಿಗಮದ ನಿರ್ದೇಶಕರು, ಬೆಂಗಳೂರು.



**ಎಂ.ಇ. ಮೌನೇಶ್ವರಚಾರಿ**
ಅಖಿಲ ಭಾರತ ವಿಶ್ವಕರ್ಮ ಪರಿಷತ್ ದಾವಣಗೆರೆ ಜಿಲ್ಲಾ ಅಧ್ಯಕ್ಷರು ಹಾಗೂ ಮುದಹದಡಿ ಗ್ರಾಮ ಪಂಚಾಯಿತಿ ಸದಸ್ಯರು.

## 3ನೇ ವರ್ಷದ ಪುಣ್ಯಸ್ಮರಣೆ



ನೇತ್ರದಾನಿ
**ಶ್ರೀಮತಿ ಲಲಿತಮ್ಮ ಕೊಟ್ಯಾಳ್ (ಗಿರಿಜಮ್ಮ)**
ನಿಧನ: 02-02-2019

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.
ನೀವು ಹಾಕಿ ಕೊಟ್ಟ ಮಾರ್ಗದರ್ಶನ ನಮಗೆ ದಾರಿ ದೀಪ,
ಸದಾ ನಿಮ್ಮ ಸ್ಮರಣೆಯಲ್ಲಿರುವ:

ಪತಿ : ಶ್ರೀ ಕೆ.ಬಿ. ಜನಾರ್ದನಪ್ಪ
ಪುತ್ರಿಯರಾದ : ಶ್ರೀಮತಿ ಕೆ.ಜೆ. ವೀಣಾ ಸತೀಶ್, ಚಟ್ನಹಳ್ಳಿ.
ಶ್ರೀಮತಿ ಕೆ.ಜೆ. ವಿನೋದ ಚಂದ್ರಶೇಖರ್, ಕಕ್ಕರಗೊಳ್ಳ.
ಪುತ್ರ : ಶ್ರೀ ಕೆ.ಜೆ. ರಾಘವೇಂದ್ರ
ಸೊಸೆ : ಶ್ರೀಮತಿ ಆಶಾ ರಾಘವೇಂದ್ರ.
ಪ್ರೀತಿಯಿಂದ ಅಮ್ಮಮ್ಮ ಎಂದು ಕರೆಯುತ್ತಿದ್ದ ಮೊಮ್ಮಕ್ಕಳಾದ: ✦ ಚಿ|| ಇಂಧೂದರ ಎ.ಎಸ್. ✦ ಚಿ|| ದರ್ಶನ್ ಎ.ಎಸ್ ಚಟ್ನಹಳ್ಳಿ ✦ ಕು|| ಪೂರ್ವಿಕಾ ಕೆ.ಸಿ. ಕಕ್ಕರಗೊಳ್ಳ ✦ ಚಿ|| ಕೇಶವ್ ಸಿದ್ಧಾಂತ್ ಕೆ.ಆರ್. ಶಿರಮಗೊಂಡನಹಳ್ಳಿ.

ಕೊಟ್ಯಾಳ್ (ಕರಿಯಪ್ಪರ) ವಂಶಸ್ಥರು ಶಿರಮಗೊಂಡನಹಳ್ಳಿ, ಗೌಡ್ರು ವಂಶಸ್ಥರು ಚಿಕ್ಕನಹಳ್ಳಿ.

SSIMS SPARSH
CENTRE FOR ACCIDENTS BONE & JOINT CARE

## ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
## ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

| ಡಾ. ರವಿಕುಮಾರ್ ಮುಕಾರ್ತಿಹಾಳ್ | ಡಾ. ನವೀನ್ ತಹಶೀಲ್ದಾರ್ |
| --- | --- |
| D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany) ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು | MS(Ortho), AOA Fellow (Melbourne, Australia), Combined Neurosurgery & Orthopedic Spine Fellowship (Amrita Institute, Kochi) ಬೆನ್ನುಹುರಿ ಶಸ್ತ್ರಚಿಕಿತ್ಸಕರು |
| ದಿನಾಂಕ: ಗುರುವಾರ, 3ನೇ ಫೆಬ್ರವರಿ 2022 | ದಿನಾಂಕ: ಗುರುವಾರ, 3ನೇ ಫೆಬ್ರವರಿ 2022 |

ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

**ನೋಂದಣಿಗಾಗಿ ಕರೆಮಾಡಿ: 96869 29090**

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ(TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte